ಸಂಪುಟ : 9 ಸಂಚಿಕೆ 07 ಪುಟ : 4 ಬೆಲೆ : 3.00 ಶುಕ್ರವಾರ ಫೆಬ್ರುವರಿ 2, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 07 Pages : 4 Price : 3.00 Friday February 2, 2024 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 2ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ.16 ಹೊಂಬಳ ನಾಕಾ, ಜನತಾ ಕಾಲೋನಿ ಅಡ್ಡೆದ ಲೈನ್, ಮಲ್ಲಮ್ಮನವರ ಲೈನ್, ಶೌಚಾಲಯ ಹಿಂದಿನ ಭಾಗ, ಮಸೂತಿ ಹಿಂದಿನ ಮತ್ತು ಮುಂದಿನ ಭಾಗ. ವಾರ್ಡ್ ನಂ. 18, 21 ಸರಾಫ್ ಬಜಾರ್, ಹುಣಶಿಮರದರವರ ಓಣಿ, ಕಾಗದಗಾರ ಓಣಿ, ಪಿ ಆಂಡ್ ಟಿ ರೋಡ್, ಮೀನಿನ ಮಾರ್ಕೆಟ್, ಖಾನತೋಟ, ಭಾವಿಯವರ ಲೈನ್, ಹಾವನೂರ, ಜವಳಗಲ್ಲಿ ನಮಾಜಿ ಲೈನ್.

ವಾರ್ಡ್ ನಂ. 12,13 ಅನಂತ ಕಾರ್ಕಳರವರ ಲೈನ್, ಗಣಪತಿ ಗುಡಿ ಹಿಂದಿನ ಲೈನ್, ಮುಧೋಳರವರ ಲೈನ್, ತೋಪಿಯವರ ಲೈನ್, ಜಾಧವ್‌ರ ಲೈನ್, ಮಾಲಿಪಾಟೀಲರ ಲೈನ್, ಅಗಸರ ಲೈನ್, ಉದ್ದಾರ ಮಾಸ್ತರ ಲೈನ್, ಜೋಪಡಿಯವರ ಲೈನ್. ವಾರ್ಡ್ ನಂ. 26 ಅಕ್ಕನ ಬಳಗ, ಕಲಾಮಂದಿರ ರೋಡ್, ಮಾಳೆಕೊಪ್ಪಮಠರ ಸಂದಿ, ತೋಂಟ-ದಾರ್ಯ ಲೈನ್, ಬಂಗಾರ ಶೆಟ್ಟರ ಲೈನ್. ವಾರ್ಡ್ ನಂ. 28 ಪಂಚಾಕ್ಷರಿ ನಗರ 3ನೇ ಕ್ರಾಸ್. ವಾರ್ಡ್ ನಂ. 6, 5 ರೇಣುಕಾಚಾರ್ಯ ಕಲ್ಯಾಣ ಮಂಟಪ ಲೈನ್, ಹುನುಮಂತ ದೇವರ ಗುಡಿ ಲೈನ್, ಬಾಳಿಕಾಯಿಯವರ ಲೈನ್, ಪಾಟೀಲರ ಲೈನ್, ಹೊನ್ನಪ್ಪರ ಲೈನ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಿಂದೂ ವಿವಾಹ ಕಾಯ್ದೆ ತಿದ್ದುಪಡಿಗೆ ಸಚಿವ ಸಂಪುಟ ಅಸ್ತು | ಪತ್ರಿಕಾಗೋಷ್ಠಿಯಲ್ಲಿ ಕಾನೂನು ಸಚಿವ ಎಚ್.ಕೆ. ಪಾಟೀಲ ಮಾಹಿತಿ

# ವಿವಾಹ ನೋಂದಣಿಗಿನ್ನು ಅಲೆದಾಟವಿಲ್ಲ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಆನ್‌ಲೈನ್ ಮೂಲಕ ಮದುವೆ ನೋಂದಣಿಗೆ ಅವಕಾಶ ಕಲ್ಪಿಸಲು ಹಿಂದೂ ಮ್ಯಾರೇಜ್ ಆ್ಯಕ್ಟ್ ತಿದ್ದುಪಡಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರು ಗುರುವಾರ ಹೇಳಿದ್ದಾರೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ, ವಿವಾಹ ನೋಂದಣಿ ಸರಳೀಕರಣಕ್ಕೆ ರಾಜ್ಯ ಸರ್ಕಾರದ ಸಮ್ಮತಿ ನೀಡಿ, ಹಿಂದೂ ವಿವಾಹ ನೊಂದಣಿ ಕಾಯ್ದೆ 2024ಕ್ಕೆ ಒಪ್ಪಿಗೆ ಸೂಚಿಸಿದೆ. ಇಲ್ಲಿಯವರೆಗೂ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ವಿವಾಹ ನೋಂದಣಿ ಆಗುತ್ತಿತ್ತು. ಈಗ ಆನ್‌ಲೈನ್ ಮೂಲಕ ನೋಂದಣಿಗೆ ಅವಕಾಶವಿದೆ. ಗ್ರಾಮ ಒನ್, ಕಾವೇರಿ-2, ಬಾಪೂಜಿ ಸೇವಾಕೇಂದ್ರಗಳಲ್ಲಿ ನೊಂದಣಿ ವಿವಾಹ ಮಾಡಬಹುದು. ಇನ್ನು ಮುಂದೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಅಲೆಯುವ ಪ್ರಮೇಯವಿಲ್ಲ ಎಂದು ಸಚಿವರು ತಿಳಿಸಿದರು.

ರಾಯಚೂರು ವಿವಿ ಆವರಣದಲ್ಲಿ ಮಾನವ ಜಿನೋಮ್ ಸಂಸ್ಥೆ ಸ್ಥಾಪನೆಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ. 104 ಪಬ್ಲಿಕ್ ಶಾಲೆಗಳ ಅಭಿವೃದ್ಧಿಗೆ 26 ಕೋಟಿ ರೂ. ಅನುಮೋದನೆ ಮತ್ತು ಅಸ್ತಿತ್ವದಲ್ಲಿರುವ 82 ಪಬ್ಲಿಕ್ ಶಾಲೆಗಳ ಅಭಿವೃದ್ಧಿಗೂ ಸಂಪುಟ ಒಪ್ಪಿಗೆ ಸೂಚಿಸಿದೆ. ಮಹಾನಗರ ಪಾಲಿಕೆಗಳಲ್ಲಿ 10 ಹಾಗೂ ನಗರಸಭೆ ವ್ಯಾಪ್ತಿಯಲ್ಲಿ 24 ಸೇರಿದಂತೆ ಒಟ್ಟು 34 ಆಧುನಿಕ ಅನಿಲ ಚಿತಾಗಾರ ಸ್ಥಾಪನೆಗೆ 36 ಕೋಟಿ ರೂ. ನೀಡಲು ಕ್ಯಾಬಿನೆಟ್ ಅನುಮೋದನೆ ನೀಡಿದೆ. ಹಾಸನ ವೈದ್ಯಕೀಯ ಕಾಲೇಜಿನಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಮೊತ್ತ 142 ಕೋಟಿ ರೂ. ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಸಚಿವರು ತಿಳಿಸಿದರು.



ಬಿಬಿಎಂಪಿ ವ್ಯಾಪ್ತಿಗೆ ಹೊಸ ಸೇರ್ಪಡೆಗೊಂಡಿರುವ 110 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಗ್ರಾಮಗಳನ್ನು 2006ರಲ್ಲಿಯೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲಾಗಿತ್ತು. ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ನಿರ್ಮಾಣ ಹಂತದಲ್ಲಿರುವ ಹೊಸ ವೈದ್ಯಕೀಯ ಕಾಲೇಜ್, ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ಮತ್ತು ಬೋಧಕ-ಬೋಧಕೇತರ ಸಿಬ್ಬಂದಿಗಳ ವಸತಿ ಗೃಹ ನಿರ್ಮಾಣಕ್ಕೆ ಪರಿಷ್ಕೃತ ಅಂದಾಜು ಮೊತ್ತ 499 ಕೋಟಿ ರೂ. ನೀಡಲು ಸಂಪುಟ ಸಭೆಯ ಅನುಮೋದನೆ ದೊರೆತಿದೆ ಎಂದರು.

ಜಲ ಸಂಪನ್ಮೂಲ ಇಲಾಖೆಯಡಿ ಬೆಳಗಾವಿಯ ಹುಚ್ಚಗಾಂವ್, ಬಸ್ತವಾಡಿಯ 20 ಕೆರೆಗಳನ್ನು ತುಂಬಿಸುವ 250 ಕೋಟಿ ರೂ. ವೆಚ್ಚದ ಯೋಜನೆ ಮತ್ತು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯ 61 ಕೆರೆ ತುಂಬಿಸುವ 519 ಕೋಟಿ ರೂ. ಯೋಜನೆಗೆ ಅನುಮೋದನೆ ನೀಡಲಾಗಿದೆ. ಬೆಂಗಳೂರಿನ ಐಒಸಿ ಜಂಕ್ಷನ್‌ನಲ್ಲಿ ಎಲಿವೇಟೆಡ್ ರೋಟರಿ ಮೇಲ್ಸೇತುವೆ ಮತ್ತು ಬೈಯಪ್ಪನಹಳ್ಳಿ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ ಹೆಚ್ಚುವರಿ ದ್ವಿಪಥದ ರೈಲ್ವೆ ಮೇಲ್ಸೇತುವೆ ನಿರ್ಮಿಸಲು ರಾಜ್ಯ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಸಚಿವ ಎಚ್.ಕೆ ಪಾಟೀಲ ತಿಳಿಸಿದರು.

### ನಾಳೆ ನೂತನ ಬಸ್‌ಗಳ ಲೋಕಾರ್ಪಣೆ। ಬಸ್‌ಗಳಲ್ಲಿ ನಗದು ರಹಿತ ಪ್ರಯಾಣಕ್ಕೆ ಚಾಲನೆ

## ಅಪಘಾತರಹಿತ ಚಾಲಕರಿಗೆ ಬೆಳ್ಳಿ ಪದಕ ವಿತರಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ವಾ.ಕ.ರ.ಸಾ.ಸಂಸ್ಥೆಯಿಂದ ನೂತನ ಬಸ್‌ಗಳ ಲೋಕಾರ್ಪಣೆ, ಅಪಘಾತರಹಿತ ಚಾಲಕರಿಗೆ ಬೆಳ್ಳಿ ಪದಕ ವಿತರಣೆ ಹಾಗೂ ಸಂಸ್ಥೆಯ ಬಸ್‌ಗಳಲ್ಲಿ ನಗದು ರಹಿತ ವ್ಯವಸ್ಥೆ ಜಾರಿಗೊಳಿಸುವ ಸಮಾರಂಭವು ನಗರದ ಹೊಸ ಬಸ್ ನಿಲ್ದಾಣದಲ್ಲಿ ಫೆಬ್ರವರಿ 3ರಂದು ಮಧ್ಯಾಹ್ನ 12.30 ಗಂಟೆಗೆ ನಡೆಯಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಕಾರ್ಯಕ್ರಮ ಉದ್ಘಾಟಿಸುವರು.


ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ವಾ.ಕ.ರ.ಸಾ.ಸಂಸ್ಥೆಯ ಅಧ್ಯಕ್ಷರು ಹಾಗೂ ಕಾಗವಾಡ ಶಾಸಕರಾದ ಭರಮಗೌಡ ಅಲಗೌಡ ಕಾಗೆ, ರಾಜ್ಯ ಖನಿಜ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್.ಪಾಟೀಲ, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ. ಪ್ರದೀಪ ಶೆಟ್ಟರ್. ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷರಾದ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ಸಾರಿಗೆ ಇಲಾಖೆಯ ಕಾರ್ಯದರ್ಶಿ ಡಾ.ಎನ್.ವಿ. ಪ್ರಸಾದ. ಕೃಷಿ ಇಲಾಖೆ ಹಾಗೂ ಕ.ರಾ.ರ.ಸಾ.ನಿಗಮದ ನಿರ್ದೇಶಕ ಅನ್ಬುಕುಮಾರ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪ ವಿಶೇಷ ಆಹ್ವಾನಿತರಾಗಿ ಆಗಮಿಸುವರು. ವಾ.ಕ.ರ.ಸಾ.ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್ ಸ್ವಾಗತ ಕೋರಿದ್ದಾರೆ.

### ಚಿಕ್ಕಮಣ್ಣೂರ ಗ್ರಾಮದಲ್ಲಿ 'ಸಂವಿಧಾನ ಜಾಗೃತಿ ಜಾಥಾ'ಕ್ಕೆ ಶಾಸಕ ಜಿ.ಎಸ್. ಪಾಟೀಲ ಚಾಲನೆ

# ಸಂವಿಧಾನದಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಲ



ನಮ್ಮ ದೇಶದ ಸಂವಿಧಾನ ರಚನೆಗೊಂಡು ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದು 75 ವರ್ಷಗಳು ಸಂದಿರುವುದು ಹೆಮ್ಮೆಯ ಸಂಗತಿ. ಆದರೆ, ಇನ್ನು ನಾವು ಇಂದಿನ ಪೀಳಿಗೆಗೆ ಸಂವಿಧಾನದ ಮಹತ್ವವನ್ನು ತಿಳಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಕ್ರಮ ಕೈಗೊಂಡು ಜನರಲ್ಲಿ ಸಂವಿಧಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯ ಮೆಚ್ಚುವಂತದ್ದು.

**- ಜಿ.ಎಸ್. ಪಾಟೀಲ.**
ಶಾಸಕರು, ಖನಿಜ ನಿಗಮದ ಅಧ್ಯಕ್ಷರು.

**■ವಿಜಯಸಾಕ್ಷಿ ಸುದ್ದಿ, ರೋಣ**

ಪ್ರಜಾಪ್ರಭುತ್ವ ಬಲವರ್ಧನೆಗೆ ಸಂವಿಧಾನ ರಕ್ಷಣೆ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ದೇಶದ ಎಲ್ಲಾ ಪ್ರಜೆಗಳೂ ಕೈಜೋಡಿಸಿ, ಸಂವಿಧಾನವನ್ನು ರಕ್ಷಿಸಬೇಕು ಎಂದು ಖನಿಜ ನಿಗಮದ ಅಧ್ಯಕ್ಷರು, ಶಾಸಕರಾದ ಜಿ.ಎಸ್. ಪಾಟೀಲ ಹೇಳಿದರು.

ಅವರು ಗುರುವಾರ ಚಿಕ್ಕಮಣ್ಣೂರ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ರಥಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

ಸಂವಿಧಾನ ಬರಿಯ ಗ್ರಂಥವಷ್ಟೇ ಅಲ್ಲ. ಬದಲಾಗಿ ನಮ್ಮ ದೇಶದ ಹಿರಿಮೆಯನ್ನು ಜಗತ್ತಿಗೆ ಪರಿಚಯಿಸಿದ ಮಹಾನ್ ಗ್ರಂಥವಾಗಿದೆ. ಜಗತ್ತಿನಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಬಲವನ್ನು ತುಂಬಿರುವುದು ಡಾ. ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನ ಎನ್ನುವುದನ್ನು ಯಾರೂ ಮರೆಯುವಂತಿಲ್ಲ ಎಂದರು.

ಭಾರತ ದೇಶವು ಅನೇಕ ಧರ್ಮ, ಭಾಷೆ ಸೇರಿದಂತೆ ವಿವಿಧ ರೀತಿಯ ನಾಗರಿಕ ಸಮುದಾಯವನ್ನು ಹೊಂದಿದೆ. ನಮ್ಮ ಸಂವಿಧಾನದಲ್ಲಿ ಜಾತ್ಯಾತೀತ ತತ್ವಕ್ಕೆ ಹೆಚ್ಚಿನ ಶಕ್ತಿ ಬಂದಿದ್ದು, ಸರ್ವರಿಗೂ ಸಮಬಾಳು- ಸಮಪಾಲು ಎಂಬ ತತ್ವಗಳನ್ನು ಜೀವಂತವಾಗಿರಿಸಿದೆ ಎಂದ ಅವರು, ದೇಶದಲ್ಲಿ ಎಲ್ಲ ವರ್ಗದ ಜನರು ಸಂವಿಧಾನದ ಇಚ್ಛೆಯಂತೆ ಸಹಬಾಳ್ವೆ ನಡೆಸಲು ಅರ್ಹರಾಗಿರುತ್ತಾರೆ ಎಂದರು.

ಗ್ರಾ.ಪಂ ಅಧ್ಯಕ್ಷೆ ಮಂಜುಳಾ ಪಾಟೀಲ, ತಹಸೀಲ್ದಾರ್ ಕೆ. ನಾಗರಾಜ, ತಾ.ಪಂ ಇಒ ರವಿ ಎ.ಎನ್., ಕೃಷಿ ಅಧಿಕಾರಿ ರವೀಂದ್ರ ಪಾಟೀಲ, ಆರ್‌ಡಬ್ಲುಎಸ್ ಎಇ ಜಗದೀಶ ಮಡಿವಾಳರ, ಮೌನೇಶ ಹಾದಿಮನಿ, ಪ್ರಕಾಶ ಹೊಸಳ್ಳಿ, ಎಂ.ಟಿ. ಆರೇರ, ಮುತ್ತು ನಂದಿ, ಸೋಮು ನಾಗರಾಜ, ಆನಂದ ಚಲವಾದಿ, ಬಸವರಾಜ ಕಾತರಕಿ, ರಮೇಶ ಪಟ್ಟೇದ, ಸಂಜಯ ದೊಡ್ಡಮನಿ ಸೇರಿದಂತೆ ತಾಲೂಕಾಡಳಿತದ ವಿವಿಧ ಇಲಾಖೆಗಳ ಅಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ತೆಲ್ಲೂರರಿಗೆ 'ಕುಮಾರವ್ಯಾಸ' ಪ್ರಶಸ್ತಿ ಪ್ರದಾನ



**■ವಿಜಯಸಾಕ್ಷಿ ಸುದ್ದಿ, ಗದಗ**

ವಿವಿಧ ಕ್ಷೇತ್ರಗಳಲ್ಲಿ ಸುದೀರ್ಘ, ಅನುಪಮ ಸೇವೆ ಸಲ್ಲಿಸಿದ ಸಾಧಕ ಮಹನೀಯರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದ ಪ್ರಶಸ್ತಿಗಳನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ವರ್ಣರಂಜಿತ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಕಥಾ ಕೀರ್ತನೆ ಕ್ಷೇತ್ರದಲ್ಲಿ ಅನನ್ಯ ಕೊಡುಗೆ ನೀಡಿದ ಗದುಗಿನ ಹಿರಿಯ ಕಲಾವಿದ, ಸಾಹಿತಿ ಡಾ. ಪಂ.ಪುಟ್ಟರಾಜ ಕವಿಗವಾಯಿಗಳವರ ಶಿಷ್ಯರಾದ ಸಿದ್ದೇಶ್ವರಶಾಸ್ತ್ರಿ ತೆಲ್ಲೂರ ಅವರಿಗೆ 'ಕುಮಾರವ್ಯಾಸ' ಪ್ರಶಸ್ತಿ ಸೇರಿದಂತೆ ಜೀವಮಾನ ಸಾಧನೆ ಮಾಡಿದ ಮಹನೀಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮುಖ್ಯಮಂತ್ರಿ ಸಿದ್ಧರಾಮಯ್ಯ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ, ಇಲಾಖೆಯ ಅಧಿಕಾರಿಗಳು ಸೇರಿದಂತೆ ಅನೇಕ ಗಣ್ಯರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

### ಮಡಿವಾಳ ಮಾಚಿದೇವ ಜಯಂತಿ ಆಚರಣೆ

# ಅರಸತ್ವ ಮೇಲಲ್ಲ, ಅಗಸತ್ವ ಕೀಳಲ್ಲ

**■ವಿಜಯಸಾಕ್ಷಿ ಸುದ್ದಿ, ಗದಗ**

ಅರಸತ್ವ ಮೇಲಲ್ಲ ಅಗಸತ್ವ ಕೀಳಲ್ಲ ಎಂದು ಕೇವಲ ಬಟ್ಟೆಯನ್ನು ಶುಭ್ರಗೊಳಿಸದೆ ಜನರ ಮನಸ್ಸಿನಲ್ಲಿರುವ ಕೊಳೆಯನ್ನು ತೊಳೆದವನೆ ಮಡಿವಾಳ ಮಾಚಿದೇವರು ಎಂದು ಪಿ.ಪಿ.ಜಿ. ಕಲಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ರಾಜಶೇಖರ ಎಸ್ ದಾನರಡ್ಡಿ ಹೇಳಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಗುರುವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದರು.



ಸಾಹಿತ್ಯವು ಕೇವಲ ಅರಮನೆಗೆ ಸೀಮಿತವಾಗಬಾರದೆಂದು ಶ್ರೀಸಾಮಾನ್ಯನಿಗೆ ತಿಳಿಯುವ ಹಾಗೆ ಸರಳ ಭಾಷೆಯಲ್ಲಿ ಬಸವಾದಿ ಶರಣರಲ್ಲಿ ಒಬ್ಬರಾಗಿ ಮಡಿವಾಳ ಮಾಚಿದೇವರು ವಚನಗಳನ್ನು ರಚಿಸಿ ಜನಸಾಮಾನ್ಯರ ಮನ ಮುಟ್ಟಿಸಿದ್ದಾರೆ. ಶಿಕ್ಷಣವೂ ಕೇವಲ ಉಳ್ಳವರಿಗೆ ಮಾತ್ರ ಮೀಸಲಾಗಿದ್ದ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಗುರುಗಳ ಹತ್ತಿರ ಶಿಕ್ಷಣ ಪಡೆದು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವಂತೆ ಎಲ್ಲರಿಗೂ ಬಾಳುವ ಮತ್ತು ಶಿಕ್ಷಣ ಪಡೆಯುವ ಹಕ್ಕಿದೆ ಎಂದು ಮಡಿವಾಳ ಮಾಚಿದೇವರು ಸಾಮಾಜಿಕ ಕ್ರಾಂತಿ ಮೂಡಿಸಿದವರಾಗಿದ್ದಾರೆ ಎಂದು ಉಪನ್ಯಾಸಕ ದಾನರಡ್ಡಿ ಹೇಳಿದರು.

ಮಡಿವಾಳ ಮಾಚಿದೇವರು ತಮ್ಮ ವಚನಗಳಲ್ಲಿ ಕಾಯಕಕ್ಕೆ ಅತ್ಯಂತ ಪ್ರಾಮುಖ್ಯತೆ ನೀಡಿದ್ದು, ಭಕ್ತಿ ಮತ್ತು ನಿಷ್ಠೆಯಿಂದ ಕಾಯಕದಲ್ಲಿ ನಿರತರಾದರೆ ದೇವರು ಸಹ ಒಲಿಯುವನು ಎಂದು ಸಾರಿದ್ದಾರೆ. ನಡೆ-ನುಡಿ ತಪ್ಪದೇ, ತತ್ವ ಸಿದ್ಧಾಂತವನ್ನು ಅನುಸರಿಸಿ ನಮ್ಮ ವ್ಯಕ್ತಿತ್ವವನ್ನು ಉನ್ನತಗೊಳಿಸಬೇಕೆಂದು ತಮ್ಮ ವಚನಗಳ ಮೂಲಕ ತಿಳಿಸಿದ್ದಾರೆ. ಶ್ರೀಸಾಮಾನ್ಯನಾಗಿದ್ದ ಮಡಿವಾಳ ಮಾಚಿದೇವರ ಜೀವನ ಸಂದೇಶದ ಕಥೆಯನ್ನು ಅರ್ಥಪೂರ್ಣವಾಗಿ ತಿಳಿಸಿದ ದಾನರಡ್ಡಿ ಅವರು,12ನೇ ಶತಮಾನದ ವಚನ ಕ್ರಾಂತಿಯೂ ಕನ್ನಡಕ್ಕೆ ದೊಡ್ಡ ಸಂಪತ್ತು ಎಂದು ಡಾ.ರಾಜಶೇಖರ ಎಸ್ ದಾನರಡ್ಡಿ ವಿವರಿಸಿದರು.

ಇದಕ್ಕೂ ಮೊದಲು ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರಯ್ಯಸ್ವಾಮಿ.ಬಿ. ವಾರ್ತಾಧಿಕಾರಿಗಳಾದ ವಸಂತ ಮಡ್ಲೂರ ಸೇರಿದಂತೆ ಗಣ್ಯರು, ಸಮಾಜ ಭಾಂದವರು, ಹಿರಿಯರು ಹಾಜರಿದ್ದರು.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ ಹೃದಯದಿಂದ ಕೇಳಿಸಿಕೊಳ್ಳಿ

–ಸುಭಾಷಿತ

## ಸಂಪಾದಕೀಯ

# ಬಿಜೆಪಿ ಸ್ವಜಾತಿ ಪ್ರೇಮ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಧ್ಯಂತರ ಬಜೆಟ್ ಮಂಡಿಸಿದರೂ ರಾಜ್ಯ ಬಿಜೆಪಿಯಲ್ಲಿ ಮಾತ್ರ ಲೋಕಸಭೆ ಚುನಾವಣೆಯದ್ದೆ ಚರ್ಚಾ ವಿಷಯ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಕಮಲ ಅರಳಿಸುವುದೇ ಬಿಜೆಪಿ ನೂತನ ರಾಜ್ಯಾಧ್ಯಕ್ಷರ ಮುಂದಿರುವ ಸವಾಲು.

ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಬಿಜೆಪಿ, ಲೋಕಸಭೆ ಚುನಾವಣೆಯಲ್ಲಿ ಗೆದ್ದು ಬೀಗಿ, ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದೆ. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಪಕ್ಷ ತೊರೆದು ಹೋದವರನ್ನು ಬಿಜೆಪಿ ಮತ್ತೆ ತನ್ನತ್ತ ಸೆಳೆಯುತ್ತಿದೆ.

ಆ ಪ್ರಯತ್ನದಲ್ಲಿ ಪ್ರಾರಂಭಿಕ ಗೆಲುವು ಕಂಡಿರುವ ಬಿಜೆಪಿ ಸದ್ಯ ಆತ್ಮವಿಶ್ವಾಸದಿಂದ ಬೀಗುತ್ತಿದೆ. ಜಗದೀಶ ಶೆಟ್ಟರ್ ಘರ್ ವಾಪ್ಸಿ ನಂತರ ಬಿಜೆಪಿಯಲ್ಲಿ ಬಿರುಸಿನ ಚಟುವಟಿಕೆ ಆರಂಭವಾಗಿದೆ. ಆದರೆ ಆ ಎಲ್ಲ ಚಟುವಟಿಕೆಗಳು ಜಾತಿ ಕೇಂದ್ರಿತವಾಗಿವೆ. ಅದರಲ್ಲೂ ಲಿಂಗಾಯತ ಕೇಂದ್ರಿತ ಎಂದರೆ ತಪ್ಪಾಗಲಾರದು.

ಜಾತಿ ಆಧಾರಿತ ಚುನಾವಣೆಯೇ ಗೆಲುವಿಗೆ ಸೋಪಾನ ಎಂದು ಭಾವಿಸಿರುವ ಬಿಜೆಪಿ, ಸ್ವಜಾತಿ ರಾಜಕಾರಣಕ್ಕೆ ಮುಂದಾಗಿದೆ. ಸ್ವ ಜಾತಿ ರಾಜಕಾರಣ ಎಂದರೆ, ಯಾವ ಕ್ಷೇತ್ರದಲ್ಲಿ ಯಾವ ಜಾತಿಯ ನಾಯಕ ಚುನಾವಣೆಯಿಂದ ಹಿಂದೆ ಸರಿದಿದ್ದಾರೋ, ಆ ಕ್ಷೇತ್ರದಲ್ಲಿ ಅದೇ ಸಮುದಾಯದ ನಾಯಕನನ್ನು ಕಣಕ್ಕಿಳಿಸುವ ಇರಾದೆಯನ್ನು ಬಿಜೆಪಿ ಹೊಂದಿದೆ.

ಆ ಕಾರಣಕ್ಕಾಗಿ ಜಗದೀಶ್ ಶೆಟ್ಟರ್ ಅವರನ್ನ ಹಾವೇರಿ ಕ್ಷೇತ್ರದಿಂದ, ಲಕ್ಷ್ಮಣ ಸವದಿ ಅವರನ್ನು ಬಾಗಲಕೋಟೆ ಕ್ಷೇತ್ರದಿಂದ ಕಣಕ್ಕಿಳಿಸುವ ಚಿಂತನೆಯೊಂದಿಗೆ ಆ ಇಬ್ಬರು ನಾಯಕರಿಗೆ ಬಿಜೆಪಿ ಗಾಳ ಹಾಕಿದೆ.

ಉತ್ತರ ಕರ್ನಾಟಕದ ಈ ಎರಡೂ ಕ್ಷೇತ್ರಗಳಲ್ಲಿ ಗೆಲ್ಲಲು ಸ್ವಜಾತಿ ಪ್ರೇಮ, ಲಿಂಗಾಯತ ಓಲೈಕೆಯಲ್ಲಿ ಬಿಜೆಪಿ ನಿರತವಾಗಿದೆ. ಸದ್ಯ ಬಿಜೆಪಿಗೆ ಲೋಕಸಭೆಯದ್ದೆ ಚಿಂತೆ. ಹೀಗಾಗಿ ಬಿಜೆಪಿ ರಾಜಕಾರಣ ಏನಿದ್ದರೂ ಚುನಾವಣೆಗಷ್ಟೆ ಸೀಮಿತ ಎನ್ನುವಂತಾಗಿದೆ.

### 'ಧಾತು' ಗೊಂಬೆ ಥಿಯೇಟರ್‌ನ ಸ್ಥಾಪಕಿಗೆ ಒಲಿದ ಪ್ರತಿಷ್ಠಿತ ಗೌರವ

# ಗೊಂಬೆಯಾಡಿಸುವ ಕೈಗೆ 'ಪದ್ಮಶ್ರೀ'

ಭಾರತ ಸರ್ಕಾರ ಕೊಡಮಾಡುವ 2024ನೇ ಸಾಲಿನ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದವರಲ್ಲಿ ಕರ್ನಾಟಕದ ಖ್ಯಾತ ಗೊಂಬೆಯಾಟ ಕಲಾವಿದೆ ಅನುಪಮಾ ಹೊಸ್ಕೆರೆ ಕೂಡ ಒಬ್ಬರು. ಅನುಪಮಾ ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ಎಂಪಾನೆಲ್ ಕಲಾವಿದೆ ಮತ್ತು 'ಧಾತು' ಗೊಂಬೆ ಥಿಯೇಟರ್‌ನ ಸ್ಥಾಪಕಿಯೂ ಹೌದು. ಕರ್ನಾಟಕ ಮತ್ತು ಅದರಾಚೆಗಿನ ಸಾಂಪ್ರದಾಯಿಕ ಗೊಂಬೆಯಾಟ ತಂತ್ರಗಳನ್ನು ಸಂರಕ್ಷಿಸಲು ಅವರು ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ.

ಬೆಂಗಳೂರಿನ ಬಸವನಗುಡಿಯ ಸಾಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಬೆಳೆದ ಅನುಪಮಾ, ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಮತ್ತು ಸಂವಹನದಲ್ಲಿ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿದ್ದು, ಕಥೆ ಹೇಳುವ ಉತ್ಸಾಹ ಮತ್ತು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಆಕರ್ಷಣೆಯಿಂದ ತಮ್ಮ ಕಲಾಯಾನವನ್ನು ಪ್ರಾರಂಭಿಸಿದರು. ಅನುಪಮಾ ಅವರ ನಾಯಕತ್ವದಲ್ಲಿ 'ಧಾತು' ಗೊಂಬೆಯಾಟ ರಂಗಭೂಮಿ ಗೊಂಬೆಯಾಟದ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಇದು ವಾರಾಂತ್ಯದ ತರಗತಿಗಳನ್ನು ನಡೆಸುತ್ತದೆ, ಬೆಂಗಳೂರಿನಲ್ಲಿ ವಾರ್ಷಿಕ ಕಾರ್ಯಕ್ರಮವನ್ನೂ ಆಯೋಜಿಸುತ್ತದೆ. ಅಲ್ಲಿ ಪ್ರಪಂಚದಾದ್ಯಂತದ ಗೊಂಬೆಯಾಟ ಕಲಾವಿದರು ಒಟ್ಟುಗೂಡುತ್ತಾರೆ.

ಹಿರಿಯ ಗೊಂಬೆಯಾಟಗಾರರಾದ ಮೈಥಿಲಿ ಶಿಕಾರ್ಪುರ್ ಮತ್ತು ಚಿತ್ರಾ ರಾವ್ ಅವರೊಂದಿಗೆ, ಅವರು ಧಾತುವಿನ ಉಪಕ್ರಮಗಳನ್ನು ಬೆಂಬಲಿಸುವ ಪ್ರಮುಖ ತಂಡವೇ ಇದೆ. ಇವರ ತೊಗಲುಗೊಂಬೆಯಾಟದ ಪ್ರಯಾಣವು 90ರ ದಶಕದಲ್ಲಿ ರಾಮಾಯಣ ಮತ್ತು ಮಹಾಭಾರತದಂತಹ ಭಾರತೀಯ ಮಹಾಕಾವ್ಯಗಳನ್ನು ಕೇಂದ್ರೀಕರಿಸಿದ ತರಗತಿಗಳೊಂದಿಗೆ ಪ್ರಾರಂಭವಾಯಿತು.

ಸ್ನಾತಕೋತ್ತರ ಪದವಿಯ ಸಮಯದಲ್ಲಿ ಅನಾಹೈಮ್‌ನ ಡಿಸ್ನಿಲ್ಯಾಂಡ್‌ಗೆ ಹತ್ತಿರದಲ್ಲಿ ವಾಸಿಸುತ್ತಿದ್ದ ನಂತರ, ಅನುಪಮಾ ಇಂಜಿನಿಯರಿಂಗ್ ಮತ್ತು ಕಲೆಯ ಸಂಯೋಜನೆಯಿಂದ ಸ್ಫೂರ್ತಿ ಪಡೆದರು. ಎಂ.ಆರ್. ರಂಗನಾಥ್ ರಾವ್ ಅವರಿಂದ ಈ ಕಲೆಯನ್ನು ಕರಗತ ಮಾಡಿಕೊಂಡರಲ್ಲದೆ, 2004ರಲ್ಲಿ 'ಧಾತು' ಸಂಸ್ಥೆಯನ್ನು ಪ್ರಾರಂಭಿಸಿದರು.

ಸಾಂಪ್ರದಾಯಿಕ ಕಲೆಗಳನ್ನು ಮುಂದಿನ ಪೀಳಿಗೆಗೆ ರವಾನಿಸುವ ಜವಾಬ್ದಾರಿಯನ್ನು ಅನುಪಮಾ ಒತ್ತಿಹೇಳಿದ್ದಾರೆ ಮತ್ತು ಗೊಂಬೆಯಾಟವು ಡಿಜಿಟಲ್ ಮಾಧ್ಯಮಕ್ಕೆ ಪರ್ಯಾಯವನ್ನು



ನೀಡಬೇಕು ಎಂದು ನಂಬಿದ್ದಾರೆ.

ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಮಂಡಲ ಸಂಸ್ಕೃತಿ ಕೇಂದ್ರದಲ್ಲಿ ಗೊಂಬೆಯಾಟ ಗ್ಯಾಲರಿಯನ್ನು ತೆರೆದಿದ್ದಾರೆ. ವಿವಿಧ ಗೊಂಬೆಯಾಟದ ವಿಶಿಷ್ಟ ಮಿಶ್ರಣವಾದ ಕರ್ನಾಟಕದ ಗೊಂಬೆಯಾಟವು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸ್ಪ್ಯಾನಿಷ್ ಫ್ಲೂ ಸಾಂಕ್ರಾಮಿಕ ರೋಗದ ಸಮಯದಲ್ಲಿ ಹಿನ್ನಡೆಯನ್ನು ಎದುರಿಸಿತು. ಇದು ಗೊಂಬೆಯಾಟಗಾರರು ಮತ್ತು ಕಲಾಕೃತಿಗಳ ನಷ್ಟಕ್ಕೆ ಕಾರಣವಾಯಿತು. ಸವಾಲುಗಳ ಹೊರತಾಗಿಯೂ, ಅನುಪಮಾ ಭಾರತೀಯ ಗೊಂಬೆಯಾಟವನ್ನು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗೆ ಕೊಂಡೊಯ್ಯಲು ಬದ್ಧರಾಗಿದ್ದಾರೆ.

ಅವರು ಅಮೆರಿಕದಲ್ಲಿ ಕಾಳಿದಾಸರ ಮಾಳವಿಕಾಗ್ನಿಮಿತ್ರಂ ನಾಟಕ ಪ್ರದರ್ಶಿಸಿದ್ದಾರೆ. ಯುರೋಪಿಯನ್ ನಗರಗಳಲ್ಲಿ ಕರ್ನಾಟಕದ ಗೊಂಬೆಯಾಟದ ಬಗ್ಗೆ ತರಗತಿಗಳನ್ನು ನಡೆಸಿದ್ದಾರೆ. ರಷ್ಯಾ, ಚೀನಾ ಮತ್ತು ಮೊರಾಕೊದಲ್ಲಿ ಪ್ರದರ್ಶನಗಳನ್ನು ನೀಡಿದ್ದಾರೆ.

ಅಲ್ಲಿರುವ ಗ್ಯಾಲರಿಯಲ್ಲಿ, ಅಂತಾರಾಷ್ಟ್ರೀಯ ಗೊಂಬೆಯಾಟಗಾರರು ಬಳಸುವ ಬೃಹತ್ ಬೊಂಬೆಗಳನ್ನು ಪಾರಂಪರಿಕ ಮೌಲ್ಯಕ್ಕಾಗಿ ಪ್ರದರ್ಶಿಸಲಾಗಿದೆ ಎಂದು ಅನುಪಮಾ ಹೇಳುತ್ತಾರೆ. ಜೆಕ್ ಗಣರಾಜ್ಯ, ಇಂಗ್ಲೆಂಡ್, ಸ್ಪೇನ್, ಬಲ್ಗೇರಿಯಾ, ಥೈಲ್ಯಾಂಡ್, ಇಂಡೋನೇಷ್ಯಾ, ದಕ್ಷಿಣ ಅಮೆರಿಕಾ ಮತ್ತು ಭಾರತದ ಪಶ್ಚಿಮ ಬಂಗಾಳ, ರಾಜಸ್ಥಾನ ಮತ್ತು ಜಾರ್ಖಂಡ್‌ನಂತಹ ರಾಜ್ಯಗಳ ಗೊಂಬೆಗಳನ್ನು ಹೊಂದಿರುವ ಅತಿದೊಡ್ಡ ಸಂಗ್ರಹಾಲಯವೇ ಇದೆ.

ಫ್ರಾನ್ಸ್ ಮತ್ತು ಬೆಲ್ಜಿಯಂನ ವಿಶ್ವವಿದ್ಯಾಲಯಗಳಲ್ಲಿ ಗೊಂಬೆಯಾಟವನ್ನು ಕಲಿಸಲು ಅನುಪಮಾ ಅವರಿಗೆ ಕೆಲವು ವರ್ಷಗಳ ಹಿಂದೆ ಎರಾಸ್ಮಸ್ ಮುಂಡಸ್ ವಿದ್ಯಾರ್ಥಿವೇತನವನ್ನು ನೀಡಲಾಯಿತು. ಪಂಚತಂತ್ರವನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದ ಕವಿ ಲಾ ಫೊಂಟೇನ್ ಅವರ ಕೃತಿಗಳನ್ನು ಫ್ರಾನ್ಸ್ ಆಚರಿಸಿದಾಗ, ಅನುಪಮಾ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಬೋಧನಾ ಸಾಧನವಾಗಿ ಪಂಚತಂತ್ರದ ಕಥೆಯ ಗೊಂಬೆ ಪ್ರದರ್ಶನವನ್ನು ಪ್ರಸ್ತುತಪಡಿಸಿದರು.

ಅಮೆರಿಕ ಪ್ರವಾಸದ ನಂತರ, ಕಾಳಿದಾಸನ ಮಾಳವಿಕಾಗ್ನಿಮಿತ್ರಂ ನಾಟಕ ಪ್ರದರ್ಶನಕ್ಕಾಗಿ 17 ಸೂಟ್‌ಕೇಸ್‌ಗಳ ತುಂಬ ಗೊಂಬೆಗಳು ಮತ್ತು ಅಗತ್ಯ ಸಲಕರಣೆಗಳೊಂದಿಗೆ ಅವರು ಬಂದಿಳಿದರು, ಇದನ್ನು ಕಿಕ್ಕಿರಿದ ಸಭಾಂಗಣಗಳಲ್ಲಿ ಪ್ರದರ್ಶಿಸಲಾಯಿತು. ಅಲ್ಲಿನ ಎಲ್ಲಾ ಪ್ರದರ್ಶನಗಳ ನಂತರವೂ ಪ್ರೇಕ್ಷಕರ ಬಾಯಿಯಿಂದ ಹೊರಟಿದ್ದು ಒಂದೇ ಉದ್ಗಾರ, 'ಭಾರತದಲ್ಲಿ ಇಂತಹ ಶ್ರೀಮಂತ ಕಲಾ ಪ್ರಕಾರವಿದೆ ಎಂದು ನಮಗೆ ತಿಳಿದೇ ಇರಲಿಲ್ಲ!'

'ಭಾರತದಲ್ಲಿ ಗೊಂಬೆಯಾಟಕ್ಕೆ ವಿಶಿಷ್ಟವೆನಿಸುವ ಇತಿಹಾಸವಿದೆ. ಗೊಂಬೆ ಆಡಿಸುವಾತ ದಾರಗಳನ್ನು ಎಳೆಯುವಾಗ ಚಲಿಸುವ ಕೈಗೊಂಬೆಯಂತೆ, ನಾವು ಭಗವಂತನ ಕೈಗೊಂಬೆಗಳು ಎಂಬ ಸಂದೇಶವನ್ನೂ ಸಾರುತ್ತದೆ. ಇಂದಿನ ಸಿನಿಮಾ, ಟಿವಿ ಧಾರಾವಾಹಿಗಳಿಗಿಂತ ಹೆಚ್ಚು ಮುದ ನೀಡುವ ಈ ಗೊಂಬೆಯಾಟ ಕಲಾ ಪ್ರಕಾರ ಕಣ್ಣೆದುರೇ ಅವಸಾನದತ್ತ ಸಾಗುತ್ತಿದೆ. ಭಾರತದ ಕಲೆಗಳ ಶ್ರೀಮಂತಿಕೆಯನ್ನು ಜೀವಂತವಾಗಿರಿಸಲು, ಮುಂದಿನ ಪೀಳಿಗೆಗಳಿಗೂ ಇದನ್ನು ಪರಿಚಯಿಸಲು ಏನಾದರೂ ಮಾಡಲೇಬೇಕೆನ್ನುವುದು ನನ್ನ ಉದ್ದೇಶ' ಎನ್ನುತ್ತಾರೆ ಅನುಪಮಾ.

'ಇಲ್ಲಿರುವ ಅನೇಕ ಗೊಂಬೆಗಳು ನಾಲ್ಕು ತಲೆಮಾರುಗಳಷ್ಟು ಹಿಂದಿನವು. ಆದರೂ ಕೆಲವು ಮರದ ಗೊಂಬೆಗಳು ಇನ್ನೂ ತಮ್ಮ ಹೊಳಪನ್ನು ಕಳೆದುಕೊಂಡಿಲ್ಲ ನೋಡಿ!' ಎನ್ನುತ್ತಾರೆ ಅನುಪಮಾ. ತೊಗಲುಗೊಂಬೆ ತಯಾರಿಸುವ ಕೇಂದ್ರ, ತೊಗಲುಗೊಂಬೆ ಗ್ಯಾಲರಿ, ಗೊಂಬೆ ಅಂಗಡಿ, ಗೊಂಬೆ ಪ್ರದರ್ಶನದ ಗಾಜಿನ ಮನೆ ಮತ್ತು ತೊಗಲುಗೊಂಬೆ ಶಿಕ್ಷಣ ಕೇಂದ್ರ ಇತರ ಆಕರ್ಷಕ ಸೇರ್ಪಡೆಗಳಾಗಿವೆ. ಅನುಪಮಾ ಅವರ ಬಳಿ ಮೆಚ್ಚಿನ 15 ಸಾವಿರ ಗೊಂಬೆಗಳ ಸಂಗ್ರಹವೇ ಇದೆ.

– **ಸತೀಶ್ ಭಟ್**, ಮಾಗೋಡ್.

# ಕಲಿಕಾ ಮೇಳ ಮಕ್ಕಳ ವಿಕಾಸಕ್ಕೆ ಪೂರಕ



■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕಲಿಕಾ ಮೇಳ ಮಕ್ಕಳ ಮನೋವಿಕಾಸಕ್ಕೆ ಸಹಕಾರಿಯಾಗಿದೆ ಎಂದು ಕೊಪ್ಪಳ ಡಯಟ್ ಪ್ರಾಂಶುಪಾಲರಾದ ಸುನಂದಾ.ಪಿ ಹೇಳಿದರು.

ಅವರು ಇಲ್ಲಿನ ತಳಕಲ್ ಗ್ರಾಮದ ಸರಕಾರಿ ಮಾದರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ತಳಕಲ್ ಕ್ಲಸ್ಟರ್ ಮಟ್ಟದ ಮಕ್ಕಳ ಕಲಿಕಾ ಮೇಳ ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಶೈಕ್ಷಣಿಕವಾಗಿ, ಆಸಕ್ತಿಯಿಂದ ಕಲಿಕೆಯಲ್ಲಿ ತೊಡಗಿಕೊಳ್ಳಲು ಕಲಿಕಾ ಮೇಳ ಸಹಕಾರಿಯಾಗಿದ್ದು, ಮಕ್ಕಳ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವುದರೊಂದಿಗೆ ವಿಷಯವಾರು ಚಟುವಟಿಕೆಗೆ ಸಹಕಾರಿಯಾಗಿದೆ ಎಂದರು.

ತಳಕಲ್ ಕ್ಲಸ್ಟರ್ ಶಾಲಾ ವಿದ್ಯಾರ್ಥಿಗಳು ಕಲಿಕಾ ಉಪಕರಣಗಳ ಪ್ರದರ್ಶನ ವೀಕ್ಷಿಸಿ ಚರ್ಚಿಸಿದರು. ಕ್ಷೇತ್ರ ಸಮನ್ವಯಾಧಿಕಾರಿ ಅಶೋಕ ಗೌಡರ, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಹರ್ತಿ, ಮಹೇಶ ಸಬರದ, ಎಸ್.ವಿ. ದಾರಣಾ, ಬಸವರಾಜ ಮೇಟಿ, ಸಿದ್ದಲಿಂಗಪ್ಪ ಶ್ಯಾಗೋಟಿ, ಖಲೀಂ ಶೇಖ, ಜಿ.ಆರ್. ಬೆಣಕಲ್ಲಮಠ, ಉದಯಕುಮಾರ ತಳವಾರ, ಸಂಗಪ್ಪ ರಾಜೋರ, ಸುರೇಶ ಮಾದಿನೂರ, ಸಂಗನಗೌಡ, ಬಸವರಾಜ ಅಂಗಡಿ, ಶಿವಪ್ಪ ಉಪ್ಪಾರ, ಈರಣ್ಣ ಶ್ರೀರೆಡ್ಡಿ, ವೀರಪ್ಪ ಗಾಣಿಗೇರ, ಮಂಜುನಾಥಯ್ಯ ತೆಗ್ಗಿನಮನಿ, ಶಿವಕುಮಾರ ಹೊಸಮನಿ, ದೇವೆಂದ್ರಪ್ಪ ಭಗನಾಳ, ರವಿ ಮಳಗಿ, ಹುಸೇನ್ ಭಗವಾನ್, ರಾಜಹ್ಮದ್ ಬಾಳಿಕಾಯಿ, ನಾಗರಾಜ ಕುರಿ, ಸಿಆರ್‌ಪಿ ಮಂಜುನಾಥ ಮಟ್ಟಿ, ಶಾಲಾ ಪ್ರಧಾನ ಗುರು ಗೋಣೆಪ್ಪ ಹಂದ್ರಾಳ, ಎಸ್‌ಡಿಎಂಸಿ ಅಧ್ಯಕ್ಷ ನಿಂಗರೆಡ್ಡಿ ವಡ್ಡಿನ, ಗ್ರಾ.ಪಂ ಅಧ್ಯಕ್ಷ ಜಹೀರಾಬೆಗಂ ಕೊಪ್ಪಳ ಮುಂತಾದವರಿದ್ದರು.

### ಗ್ರಾ.ಪಂ, ಕಂದಾಯ ಅಧಿಕಾರಿಗಳಿಂದ ಸರ್ವೆ ಕಾರ್ಯ: ಗ್ರಾಮಸ್ಥರಲ್ಲಿ ಗೊಂದಲ

# ಸರ್ವೆ ನಿಲ್ಲಿಸಲು ತಹಸೀಲ್ದಾರರಿಗೆ ಮನವಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ರಾಜೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೈರಾಪೂರ ಗ್ರಾಮದಲ್ಲಿ ನಿವೇಶನ ಮತ್ತು ಭೂಮಿ ಅಳೆಯುವ ಕಾರ್ಯಕ್ಕೆ ಕಂದಾಯ ಇಲಾಖೆ ಮುಂದಾಗಿದ್ದು, ಗ್ರಾಮ ಸರ್ವೆ ಕಾರ್ಯ ನಿಲ್ಲಿಸಬೇಕು ಎಂದು ಒತ್ತಾಯಿಸಿ ತಹಸೀಲ್ದಾರರಿಗೆ ಬುಧವಾರ ಗ್ರಾಮಸ್ಥರು ಮನವಿ ಸಲ್ಲಿಸಿದರು.



ಗ್ರಾಮದಲ್ಲಿ ಗ್ರಾ.ಪಂ ಹಾಗೂ ಕಂದಾಯ ಅಧಿಕಾರಿಗಳು ಸರ್ವೆ ಕಾರ್ಯ ನಡೆಸುತ್ತಿದ್ದಾರೆ. ಕೇಳಿದರೆ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡಲಾಗುತ್ತದೆ ಎಂದು ಹೇಳುತ್ತಿದ್ದಾರೆ. ಗ್ರಾಮದಲ್ಲಿನ ನಿವೇಶನ ಮತ್ತು ನಮ್ಮ ಜಮೀನಿನ ಬಗ್ಗೆ ಅನೇಕ ಗೊಂದಲವಿದೆ. ಕಳೆದ ಕೆಲ ತಲೆಮಾರುಗಳಿಂದ ನಾವು ಭೈರಾಪೂರ ಗ್ರಾಮದಲ್ಲಿ ಬದುಕು ಕಟ್ಟಿಕೊಂಡಿದ್ದು ಅದಕ್ಕೆ ಪೂರಕವಾದ ನಮ್ಮ ಮನೆಯ ಅಳತೆ, ಉತಾರ ಸೇರಿ ಇತರ ದಾಖಲೆಗಳು ರಾಜೂರು ಗ್ರಾ.ಪಂನಲ್ಲಿವೆ. ಆದರೆ ಅಧಿಕಾರಿಗಳು ಕಂದಾಯ ಗ್ರಾಮ ಮಾಡುತ್ತೇವೆ ಎಂದು ಸರ್ವೆ ಕಾರ್ಯಕ್ಕೆ ನಡೆಸುತ್ತಿದ್ದು, ಸರ್ವೆ ಬಳಿಕ ನೀಡುವ ಅಳತೆ ಹಾಗೂ ಗ್ರಾ.ಪಂನಲ್ಲಿನ ದಾಖಲೆಗಳಲ್ಲಿ ವ್ಯತ್ಯಾಸವಾದರೆ ಹೊಸ ಸಮಸ್ಯೆ ಸೃಷ್ಟಿಯಾಗಲಿದೆ ಎಂದರು.

ನಾವು ವಾಸಿಸುವ ಮನೆಗಳು ಅರಣ್ಯ ಭೂಮಿ, ಕಂದಾಯ ಭೂಮಿಯೋ ಅಥವಾ ಯಾರ ಮಾಲೀಕತ್ವಕ್ಕೆ ಸೇರಿದ್ದು ಎಂಬುದು ತಿಳಿದಿಲ್ಲ. ಏಕೆಂದರೆ, ಓರ್ವ ವ್ಯಕ್ತಿ ಗ್ರಾಮದಲ್ಲಿ ಸಾಕಷ್ಟು ಜಮೀನನ್ನು ಖರೀದಿ ಮಾಡಿದ್ದಾರೆ. ಹೀಗಾಗಿ ಜಮೀನು ಖರೀದಿಸಿದ ಮಾಲಿಕರಿಂದ ತೊಂದರೆಯಿದ್ದು, ತಕ್ಷಣವೇ ಸರ್ವೆ ಕಾರ್ಯವನ್ನು ನಿಲ್ಲಿಸಲು ಅಧಿಕಾರಿಗಳಿಗೆ ಸೂಚಿಸಬೇಕು ಎಂದರು.

ಈ ವೇಳೆ ಕಳಕಪ್ಪ ಮಾಗಿ, ಶರಣಪ್ಪ ಹೊಸಮನಿ, ಯಮನೂರಪ್ಪ ಜೊಳ್ಳಿಯವರ, ಚನ್ನಬಸಪ್ಪ ಪೂಜಾರ, ಹೊಳಿಯಪ್ಪ ಜೊಳ್ಳಿಯವರ, ಕೆ.ಜಿ.ಬಾದಿಮನಾಳ, ಮುಕುಂದಪ್ಪ ಪೂಜಾರ, ಶರಣಪ್ಪ ಗಾನದಾಳ, ದುರಗಪ್ಪ ಹೊಸಮನಿ, ಬೊಮ್ಮಪ್ಪ ಕಾಟಾಪೂರ, ಮಾಂತೇಶ ಗರೇಬಾಳ, ಶಿವಪ್ಪ ಮಾಗಿ, ಮಂಜುನಾಥ ಗಾನದಾಳ, ಹನಮಂತಪ್ಪ ಮಾಗಿ ಮುಂತಾದವರಿದ್ದರು.

ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಮನವಿ ಸ್ವೀಕರಿಸಿ ಮಾತನಾಡಿ, ಭೈರಾಪೂರ ಗ್ರಾಮದಲ್ಲಿ ನಡೆಯುತ್ತಿರುವ ಸರ್ವೆಗೆ ಗ್ರಾಮಸ್ಥರು ಸಹಕಾರ ನೀಡಬೇಕು. ಕಂದಾಯ ಗ್ರಾಮ ಆಗುವದರಿಂದ ನಿಮಗೆ ಲಾಭವಾಗಲಿದೆಯೇ ಹೊರತು ನಷ್ಟವಾಗುವದಿಲ್ಲ. ಅಲ್ಲದೆ ಗ್ರಾಮಸ್ಥರ ಮಾಲೀಕತ್ವದ ದಾಖಲೆಗಳು ರಾಜೂರು ಗ್ರಾ.ಪಂನಲ್ಲಿ ಲಭ್ಯವಾಗಲಿವೆ. ಹೀಗಾಗಿ ಗ್ರಾಮಸ್ಥರು ಸರ್ವೆ ಕಾರ್ಯಕ್ಕೆ ಸಹಕಾರ ನೀಡಬೇಕು ಎಂದರು.

### 'ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಸಂಕಿರಣ–ಐತಿಹಾಸಿಕ ದಾಖಲೆ, ಛಾಯಾಚಿತ್ರಗಳ ಪ್ರದರ್ಶನ'

# ಫೆ.3ರಿಂದ ವಿವಿಧ ವಿಚಾರಗೋಷ್ಠಿ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ–50 ಹಾಗೂ ಕರ್ನಾಟಕ ನಾಮಕರಣ–50ರ ಮಹೋತ್ಸವ, ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ ಇವರ ಸಹಯೋಗದಲ್ಲಿ 'ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಸಂಕಿರಣ ಹಾಗೂ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರಗಳ ಪ್ರದರ್ಶನ' ಸಮಾರಂಭವು ಫೆಬ್ರುವರಿ 3, 4 ಮತ್ತು 5ರಂದು ಹುಲಕೋಟಿಯ ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಜರುಗಲಿವೆ.

ವಿಚಾರಗೋಷ್ಠಿ–1: ಫೆಬ್ರುವರಿ 3ರಂದು ಮಧ್ಯಾಹ್ನ 2.30 ಗಂಟೆಗೆ ಕೆ.ಎಚ್. ಪಾಟೀಲ ವೇದಿಕೆಯಲ್ಲಿ ವಿಚಾರಗೋಷ್ಠಿ 1 ಜರುಗಲಿದೆ. ಹಿರಿಯ ಸಾಹಿತಿ ಡಾ. ಅನ್ನದಾನಿ ಹಿರೇಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಅಧ್ಯಯನಾಂಗ ನಿರ್ದೇಶಕ ಡಾ. ಅಮರೇಶ ಯತಗಲ್ಲ ಅವರು ಕರ್ನಾಟಕ ಏಕೀಕರಣ ಚಳುವಳಿಯ ಸಾಹಿತ್ಯ ಕುರಿತು, ಕರ್ನಾಟಕ ವಿಶ್ವ ವಿದ್ಯಾಲಯದ



ನಿವೃತ್ತ ಪ್ರಾಧ್ಯಾಪಕ ಡಾ. ಐ.ಕೆ. ಪತ್ತಾರ ಅವರು ಕನ್ನಡ ಬೆಳವಣಿಗೆಗೆ ಬ್ರಿಟಿಷ್ ಅಧಿಕಾರಿಗಳ ಕೊಡುಗೆ ಕುರಿತು, ನಿವೃತ್ತ ಪ್ರಾಧ್ಯಾಪಕ ಪ್ರೊ. ಜೆ.ಕೆ. ಜಮಾದಾರ ಅವರು ಕರ್ನಾಟಕ ನಾಮಕರಣದಲ್ಲಿ ಗದಗ ಜಿಲ್ಲೆಯ ಪಾತ್ರದ ಕುರಿತು, ಧಾರವಾಡ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಎಸ್. ಎಸ್. ಅಂಗಡಿ ಅವರು ಕರ್ನಾಟಕ ಗಡಿ ಚಳುವಳಿಗಳ ಕುರಿತು ವಿಚಾರಗೋಷ್ಠಿ ನಡೆಸಲಿದ್ದಾರೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಗ್ರಂಥಪಾಲಕರಾದ ರಮೇಶ ಪಾಟೀಲ ಗೌರವ ಉಪಸ್ಥಿತಿ ವಹಿಸುವರು.


ವಿಚಾರಗೋಷ್ಠಿ–2: ಫೆಬ್ರುವರಿ 3ರಂದು ಮಧ್ಯಾಹ್ನ 2.30 ಗಂಟೆಗೆ ಆಲೂರು ವೆಂಕಟರಾವ್ ವೇದಿಕೆ–2ರಲ್ಲಿ ವಿಚಾರಗೋಷ್ಠಿ–2 ಜರುಗಲಿದೆ. ವಿಶ್ರಾಂತ ಪ್ರಾಂಶುಪಾಲರಾದ ಡಾ. ಜೆ.ಬಿ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಗದಗ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ರಾಜೇಂದ್ರ ಗಡಾದ ಅವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಿತ್ತೂರು ಕರ್ನಾಟಕದ ಪತ್ರಿಕೆಗಳ ಪಾತ್ರ, ಗೋವಾ ಇಂಡೋ ಪೋರ್ಚುಗೀಸ್ ಸಾಹಿತ್ಯ ಪರಿಷತ್ತು ನಿರ್ದೇಶಕ ಡಾ.ಅರವಿಂದ ಯಾಳಗಿ ಅವರು ವಿದೇಶಿ ಪತ್ರಾಗಾರಗಳಲ್ಲಿರುವ ಕರ್ನಾಟಕ ಇತಿಹಾಸದ ದಾಖಲೆಗಳು ಕುರಿತು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮಹೇಶ.ಎನ್, ಧಾರವಾಡದ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಜಿ.ಎಂ. ಹೆಗಡೆಯವರು ಕರ್ನಾಟಕ ಏಕೀಕರಣ–ಕನ್ನಡ ಕವಿಗಳು ಕಂಡಂತೆ ಕುರಿತು ವಿಚಾರಗೋಷ್ಠಿ ನಡೆಸಲಿದ್ದಾರೆ. ಧಾರವಾಡ ಪುರಾತತ್ವ ಇಲಾಖೆಯ ನಿವೃತ್ತ ಉಪನಿರ್ದೇಶಕ ಡಾ. ವಾಸುದೇವ ಎಸ್.ಕೆ. ಗೌರವ ಉಪಸ್ಥಿತಿ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ದಿ. ಕಮರಪ್ಪ ಶಾಲೆಯ ವಾರ್ಷಿಕೋತ್ಸವ ಫೆ.3ಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಸ್ಥಳೀಯ ಕುರ್ತಕೋಟಿ ಗ್ರಾಮದ ಕುರ್ತಕೋಟಿ ಎಜ್ಯುಕೇಶನ್ ಸೊಸೈಟಿ, ದಿವಂಗತ ಕಮರಪ್ಪ ಲಕ್ಕೇಶ್ವರ ಪೂರ್ವ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ 27ನೇ ವಾರ್ಷಿಕೋತ್ಸವದ ಅಂಗವಾಗಿ ಫೆ.3ರಂದು ಮಕ್ಕಳ ಸಾಂಸ್ಕೃತಿ ಕಾರ್ಯಕ್ರಮವು ವ್ಯವಸಾಯ ಸೇವಾ ಸಹಕಾರಿ ಸಂಘದ ಬಯಲು ಜಾಗೆಯಲ್ಲಿ ಜರುಗಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಜಿ.ಎಂ. ಡಬಾಲಿ ವಹಿಸಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಗ್ರಾ.ಪಂ ಸದಸ್ಯರಾದ ಎ.ಎ. ಇನಾಮತಿ, ಅತಿಥಿಗಳಾಗಿ ಅಂತೂರು ಬೆಂತೂರ್ ಸಮೂಹ ಸಂಪನ್ಮೂಲ ವ್ಯಕ್ತಿ ಬಿ.ಎಮ್. ಹೊಂಬಳ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ರಾಧಿಕಾ ದೇವೇಂದ್ರಗೌಡ ಪಾಟೀಲ್ ಮತ್ತು ಮೊರಾರ್ಜಿ ವಸತಿ ಶಾಲೆಗೆ ಆಯ್ಕೆಯಾದ ವಿದ್ಯಾರ್ಥಿಗಳಾದ ಪ್ರತಿಭಾ ಜ್ಯೋತಿ, ಮೆಹಕ್ ನಮಾಜಿ, ಸಮ್ರಿನಾ ಶೇತಸನದಿ, ಸುಹಾನಾಬೇಗಮ್ ತಹಸಿಲ್ದಾರ್‌ರನ್ನು ಸನ್ಮಾನಿಸಲಾಗುವುದು. ಪಾಲಕ ಪ್ರತಿನಿಧಿಗಳಾಗಿ ಮುತ್ತಪ್ಪ ನೀಲಪ್ಪ ದಿಂಡೆನವರ್, ಸೈನಾಜ್‌ಬೇಗಂ ಬಾಬು ಟೆಕ್ಕೆದ, ಸಾವಿತ್ರಿ ಮಂಜುನಾಥ್ ಮಾನೇದ ಆಗಮಿಸುವರು ಎಂದು ಪ್ರಕಟಣೆ ತಿಳಿಸಿದೆ.



■ವಿಜಯಸಾಕ್ಷಿ ಸುದ್ದಿ, ಧಾರವಾಡ

ಜಿಲ್ಲಾ ಖಜಾನೆಗೆ ಪದೋನ್ನತಿ ಮೂಲಕ ಸಹಾಯಕ ಖಜಾನೆ ಅಧಿಕಾರಿಗಳಾಗಿ ಆಗಮಿಸಿರುವ ರಾಜಶೇಖರ ಸುಬ್ಬಾಪುರಮಠ ಅವರನ್ನು ಗುರುವಾರ ಬೆಳಿಗ್ಗೆ ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಎಫ್. ಸಿದ್ದನಗೌಡರ ನೇತೃತ್ವದಲ್ಲಿ ಜಿಲ್ಲಾ ಪದಾಧಿಕಾರಿಗಳು ಮತ್ತು ಖಜಾನೆ ಇಲಾಖೆ ಅಧಿಕಾರಿಗಳು ಸ್ವಾಗತಿಸಿ, ಸನ್ಮಾನಿಸಿದರು.

# ನಿವೃತ್ತ ಸೈನಿಕನಿಗೆ ಸಂಭ್ರಮದ ಸ್ವಾಗತ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಭಾರತೀಯ ಸೇನೆಯಲ್ಲಿ 22 ವರ್ಷ ಸೇವೆ ಸಲ್ಲಿಸಿ ಸ್ವಗ್ರಾಮಕ್ಕೆ ಆಗಮಿಸಿದ ಇಲ್ಲಿಯ ರುದ್ರಪ್ಪ ಮಾರನಬಸರಿ ಅವರನ್ನು ಅತ್ತಿಮಬ್ಬೆ ಮಹಾದ್ವಾರದಲ್ಲಿ ಹೂ ಮಾಲೆ ಹಾಕಿ ಗ್ರಾಮಸ್ಥರು ಸಂಭ್ರಮದಿಂದ ಬರಮಾಡಿಕೊಂಡರು.

ನಂತರ ನಡೆದ ಕಾರ್ಯಕ್ರಮದಲ್ಲಿ ಯುವ ಮುಖಂಡ ಬಸನಗೌಡ ಬಿರಾದಾರ ಮಾತನಾಡಿ, ನಮ್ಮ ದೇಶ ರಕ್ಷಣೆಯಲ್ಲಿ ಯೋಧರ ಪಾತ್ರ ಪ್ರಮುಖವಾಗಿದ್ದು, ದೇಶದ ಗಡಿಯಲ್ಲಿ ಸೈನಿಕರ ಸೇವೆಯಿಂದ ನಾವೆಲ್ಲರೂ ಸುರಕ್ಷಿತವಾಗಿದ್ದೇವೆ. ಇಂದು ರುದ್ರಪ್ಪ ಮಾರನಬಸರಿ ಅವರು 22 ವರ್ಷ ಚಳಿ, ಬಿಸಿಲೆನ್ನದೇ ಗಡಿ ಕಾಯುತ್ತಾ ದೇಶ ಸೇವೆಯನ್ನು ಸಲ್ಲಿಸಿ ನಿವೃತ್ತರರಾಗಿ ನಮ್ಮ ಗ್ರಾಮಕ್ಕೆ ಆಗಮಿಸಿದ್ದು ಹೆಮ್ಮೆ ತಂದಿದೆ ಎಂದರು.

ನಿವೃತ್ತ ಯೋಧ ರುದ್ರಪ್ಪ ಮಾರನಬಸರಿ ಮಾತನಾಡಿ, 22 ವರ್ಷಗಳ ಕಾಲ ದೇಶ ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಪುಣ್ಯವಾಗಿದೆ. ದೇಶ ಸೇವೆ ಸಲ್ಲಿಸಲು ಗ್ರಾಮಸ್ಥರ ಸಹಕಾರ ದೊಡ್ಡದಾಗಿದೆ. ನನ್ನ ನಿವೃತ್ತ ಜೀವನದಲ್ಲಿ ಯುವಕರಿಗೆ ಭಾರತೀಯ ಸೇನೆ ಸೇರಲು ಮಾರ್ಗದರ್ಶನ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಸದಸ್ಯ ಮಹಾಂತೇಶ ಕಮತರ, ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ವಿಜಯ ಬಡಿಗೇರ, ಮಾಜಿ ಸೈನಿಕರಾದ ಪರಸಪ್ಪ ಗುಂಡಳ್ಳಿ, ಬಸವರಾಜ ಕುಕನೂರು, ಮಹೇಶ ಹಿರೇಹಾಳ, ಶರಣಯ್ಯ ಗಂದದ, ಅಂದಾನಯ್ಯ ನರಗುಂದಮಠ, ಮಂಜುನಾಥ ಸಜ್ಜನರ, ಈರಣ್ಣ ತಡಹಾಳ, ಮಹಾಂತೇಶ ಗುರಿಕಾರ, ಮರಿಯಪ್ಪ ವಡ್ಡರ, ಭರಮಪ್ಪ ಮಂಗಳೂರು ಇದ್ದರು.

**ಕೇಂದ್ರ ಬಜೆಟ್ 2024**

## ರೈಲ್ವೆಗೆ ದೊಡ್ಡ ಕೊಡುಗೆ, 40 ಸಾವಿರ ಸಾಮಾನ್ಯ ಬೋಗಿಗಳು ವಂದೇ ಭಾರತ್ ದರ್ಜೆಗೆ!



■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2024–25ರ ಮಧ್ಯಂತರ ಬಜೆಟ್ ಅನ್ನು ಮಂಡಿಸಿದ್ದು ಬಜೆಟ್‌ನ ಆರಂಭಿಕ ಘೋಷಣೆಗಳಲ್ಲಿಯೇ ಅವರು ಸಾರಿಗೆಗಾಗಿ ದೊಡ್ಡ ಘೋಷಣೆಗಳನ್ನು ಮಾಡಿದ್ದಾರೆ.

ಸಾಮಾನ್ಯ ರೈಲುಗಳ ಬೋಗಿಗಳನ್ನು ವಂದೇ ಭಾರತ್ ದರ್ಜೆಗೇರಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಇದಲ್ಲದೇ ಮೆಟ್ರೋ ಮತ್ತು ನಮೋ ರೈಲನ್ನು ಇತರ ನಗರಗಳಿಗೂ ವಿಸ್ತರಿಸಲಿದೆ.

ಸುಮಾರು 40 ಸಾವಿರ ರೈಲ್ವೆ ಬೋಗಿಗಳನ್ನು ವಂದೇ ಭಾರತ್ ದರ್ಜೆಗೆ ಪರಿವರ್ತಿಸಲಾಗುವುದು ಎಂದು ಸೀತಾರಾಮನ್ ಮಾಹಿತಿ ನೀಡಿದ್ದಾರೆ. ಇದರೊಂದಿಗೆ 3 ಹೊಸ ರೈಲು ಕಾರಿಡಾರ್‌ಗಳ ನಿರ್ಮಾಣವನ್ನೂ ಸರ್ಕಾರ ಘೋಷಿಸಿದ್ದು, ಸರಕು ಸಾಗಣೆ ಕಾರಿಡಾರ್‌ನ ಕಾಮಗಾರಿಯೂ ನಡೆಯುತ್ತಿದೆ.

ಕಳೆದ ಹತ್ತು ವರ್ಷಗಳಲ್ಲಿ ದೇಶದ ವಿಮಾನ ನಿಲ್ದಾಣಗಳ ಸಂಖ್ಯೆಯೂ ಹೆಚ್ಚಿದೆ ಎಂದರು. ಪ್ರಸ್ತುತ, ದೇಶದಲ್ಲಿ 149 ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

**ಬಂಕಸಾಣ ಹೊಳೆಲಿಂಗೇಶ್ವರ ಜಾಗೃತ ಕ್ಷೇತ್ರದಲ್ಲಿ ಮಹಾರುದ್ರ ಯಜ್ಞ ಸಮಾರೋಪ**

# ಪರಶಿವ ತತ್ವಕ್ಕಿಂತ ಮಿಗಿಲಾದುದಿಲ್ಲ

■ವಿಜಯಸಾಕ್ಷಿ ಸುದ್ದಿ, ಸೊರಬ

ಮಾನವ ಜೀವನ ಸುಖ-ದುಃಖಗಳಿಂದ ಕೂಡಿದೆ. ಸುಖ, ಶಾಂತಿ, ನೆಮ್ಮದಿಯ ಬದುಕಿಗಾಗಿ ನಿರಂತರ ಶಿವಜ್ಞಾನ ಮತ್ತು ಪೂಜಾದಿಗಳಲ್ಲಿ ನಿರತರಾದವರಿಗೆ ಯಾವುದರ ಭಯವೂ ಇರುವುದಿಲ್ಲ. ಸಕಲ ಜನ ಸಮುದಾಯದ ಒಳಿತಿಗಾಗಿ ಮಹಾರುದ್ರ ಯಜ್ಞ ನಡೆದಿರುವುದು ಸಂತೋಷದ ಸಂಗತಿ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಸೊರಬ ತಾಲೂಕಿನ ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾದ ತಾಲೂಕಾ ಘಟಕದ ಆಶ್ರಯದಲ್ಲಿ ಬಂಕಸಾಣ ಹೊಳೆಲಿಂಗೇಶ್ವರ ಜಾಗೃತ ಕ್ಷೇತ್ರದಲ್ಲಿ ಜರುಗಿದ ಮಹಾರುದ್ರ ಯಜ್ಞ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ವಿಶ್ವ ಶಕ್ತಿಗೆ ಮೂಲ ಶಿವ ಶಕ್ತಿ. ಪರಶಿವ ತತ್ವಕ್ಕಿಂತ ಮಿಗಿಲಾದ ತತ್ವ ಈ ಜಗದಲ್ಲಿ ಮತ್ತೊಂದಿಲ್ಲ. ವೀರಶೈವ ಧರ್ಮದಲ್ಲಿ ಪಂಚ ಯಜ್ಞಗಳನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಶಿವನಿಗೆ ಸಮರ್ಪಿತವಾದ ಪತ್ರ-ಪುಷ್ಪ-ಫಲಗಳನ್ನು ಸ್ವೀಕರಿಸುವುದರಿಂದ ಸರ್ವ ಪಾಪ ತಾಪಗಳು ಪರಿಹಾರವಾಗುತ್ತವೆ. ವಿಶ್ವವನ್ನು ಬೆಳಗುವ ಪೂರ್ಣಾಹಂತಾತ್ಮಕವಾದ ಸ್ವಾತ್ಮ ತೇಜದಲ್ಲಿ ಈ ದೃಶ್ಯ ರೂಪವೆಲ್ಲವನ್ನೂ ಕಾಣಬಹುದು. ರವಿ ಕಿರಣದಿಂದ



ಕಮಲ ಅರಳುವಂತೆ ಗುರು ಕಾರುಣ್ಯದಿಂದ ಶಿಷ್ಯನ ಮನ ಅರಳುವುದು.

ದುಗ್ಲಿ-ಕಡೇನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯರು, ಶಾಂತಪುರ ಶಿವಾನಂದ ಶಿವಾಚಾರ್ಯರು, ಜಡೆ ಡಾ. ಮಹಾಂತಸ್ವಾಮಿಗಳು, ಕ್ಯಾಸನೂರು ತೊಗರ್ಸಿಯ ಗುರಬಸವ ಪಂಡಿತಾರಾಧ್ಯ ಶಿವಾಚಾರ್ಯರು, ಕಣ್ವಕುಪ್ಪೆ ಶಾಂತಲಿಂಗ ಶಿವಾಚಾರ್ಯರು, ಲಕ್ಕವಳ್ಳಿ ಸ್ವಸ್ತಿ ವೃಷಭಸೇನ ಸ್ವಾಮಿಗಳು ಪಾಲ್ಗೊಂಡು ಉಪದೇಶಾಮೃತವನ್ನಿತ್ತರು. ಹಲವಾರು ವೇದ ವಿದ್ವಾಂಸರಿಗೆ, ಗಣ್ಯ ದಾನಿಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಅರೆತಲಗಡ್ಡಿ ವಿದ್ವಾನ್ ಶಿವಕುಮಾರ ಶಾಸ್ತ್ರಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಅ.ಕ.ವೀ. ಪುರೋಹಿತ ಮಹಾಸಭಾದ ರಾಜ್ಯಾಧ್ಯಕ್ಷ ವೇ.ಚನ್ನೇಶ ಶಾಸ್ತ್ರಿ, ಶ್ರೀ ಹೊಳೆಲಿಂಗೇಶ್ವರ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಜಪ್ಪಗೌಡ್ರು ಬಂಕಸಾಣ, ಜಡೆ ಗ್ರಾ.ಪಂ ಅಧ್ಯಕ್ಷ ಅಮಿತಗೌಡ್ರು ಇದ್ದರು. ಸೊರಬದ ಮಲ್ಲಿಕಾರ್ಜುನಸ್ವಾಮಿ ಅರಮನೆಮಠ ಸ್ವಾಗತಿಸಿದರು. ಬಂಕವಳ್ಳಿ ವೀರೇಂದ್ರ ಪಾಟೀಲ ನಿರೂಪಿಸಿದರು. ಮಾರನಬೀಡ ಇಂದ್ರಯ್ಯ ಹಿರೇಮಠ ಇವರಿಂದ ಭಕ್ತಿಗೀತೆ ಜರುಗಿತು. ಹರತಾಳು ವಿಶ್ವಕರ್ಮ ಚಂಡೆ ಬಳಗ, ತೆಲಗುಂದ ಶಾಂತಿನಿಕೇತನ ಇಂಗ್ಲೀಷ್ ಮೀಡಿಯಂ ಶಾಲೆ ಮತ್ತು ಆನವಟ್ಟಿ ಕಲಾಕಾರ್ ನೃತ್ಯ ಶಾಲೆ ಇವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮಕ್ಕೂ ಮುನ್ನ ವರದಾ ನದಿ ತಟದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯದಿಂದ ಹೊಳೆಲಿಂಗೇಶ್ವರ ದೇವಸ್ಥಾನದವರೆಗೆ ಪೂರ್ಣಕುಂಭ, ಮಂಗಲ ವಾದ್ಯಗಳೊಂದಿಗೆ ಶ್ರೀ ರಂಭಾಪುರಿ ಜಗದ್ಗುರುಗಳನ್ನು ಬರ ಮಾಡಿಕೊಳ್ಳಲಾಯಿತು. ಆಗಮಿಸಿದ ಸಹಸ್ರಾರು ಭಕ್ತರಿಗೆ ಅನ್ನ ದಾಸೋಹ ಜರುಗಿತು.

> ಸದ್ಗುಣಶೀಲನಾದ ಗುರುವು ಪ್ರಬೋಧಿಸಿ, ಪ್ರಚೋದಿಸಿ ಪ್ರೇರಣೆ ನೀಡಲು ಶಿಷ್ಯನ ಜೀವ ಭಾವ ತೊಲಗಿ ಜೀವನ್ಮುಕ್ತನಾಗುವನು. ಸರ್ವ ಜನರ ಸಂಕಲ್ಪ ಸಿದ್ಧಿಗಾಗಿ ಶಾಂತಿ ಸಂತೃಪ್ತಿಯ ಪ್ರಾಪ್ತಿಗಾಗಿ ಕೈಗೊಂಡ 3 ದಿನಗಳ ಮಹಾರುದ್ರ ಯಜ್ಞ ತಾಲೂಕಿನ ಇತಿಹಾಸದಲ್ಲಿ ಇದೇ ಮೊದಲಾಗಿದೆ ಎಂದು ಹರುಷ ವ್ಯಕ್ತಪಡಿಸಿದ ಜಗದ್ಗುರುಗಳು, ಸೊರಬ ತಾಲೂಕ ಘಟಕದ ಅಧ್ಯಕ್ಷ ವೇ.ಹಾಲಸ್ವಾಮಿ ಶಾಸ್ತ್ರಿಗಳ ಮುಂದಾಳತ್ವದಲ್ಲಿ ನೂರಾರು ಪುರೋಹಿತರು ಪಾಲ್ಗೊಂಡಿರುವುದು ಹೆಮ್ಮೆಯ ಸಂಗತಿ ಎಂದರು.

# ನಿರ್ದಿಷ್ಟ ಗುರಿಯಿಂದ ಸಾಧನೆ ಸಾಧ್ಯ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ವಿದ್ಯಾರ್ಥಿ ಜೀವನದಲ್ಲಿ ಅಸಾಧ್ಯವಾದುದನ್ನು ಸಾಧ್ಯವಿದೆ ಎಂದು ಕಲಿಸುವುದೇ ಶಿಕ್ಷಣ ಎಂದು ಹುನಗುಂದ ನಿವೃತ್ತ ಶಿಕ್ಷಕ ವಿಜಯಮಾಹಾಂತೇಶ ಗದ್ದನಕೇರಿ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಶಿಕ್ಷಣ ಸಮಿತಿಯ ಎಸ್‌ಜೆಜೆಎಂ ಸಂಯುಕ್ತ ಪದವಿಪೂರ್ವ ಮಾಹಾವಿದ್ಯಾಲಯದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.



ವಿದ್ಯೆ ಎನ್ನುವುದು ಒಂದು ತಪಸ್ಸು. ವಿದ್ಯಾರ್ಥಿಗಳು ತಪಸ್ವಿಗಳು, ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ. ನಿರ್ದಿಷ್ಟ ಗುರಿ ಇಟ್ಟುಕೊಂಡು ಸತತ ಪ್ರಯತ್ನದ ಬೆನ್ನು ಬಿದ್ದಲ್ಲಿ, ಯಶಸ್ಸು ಕಟ್ಟಿಟ್ಟ ಬುತ್ತಿ. ಗುರುಗಳು ಹೇಳಿದ ಪಾಠ, ಪಠ್ಯೇತರ ಚಟುವಟಿಕೆ, ಕ್ರೀಡೆ ಹೀಗೆ ಹಲವಾರು ವಿಭಾಗಲ್ಲಿ ಭಾಗವಹಿಸುವುದರಿಂದ ಸಾಧನೆಯ ಶಿಖರವನ್ನು ಏರಬಹುದು. ಇದರಿಂದ ತಂದೆ-ತಾಯಿ, ಕಲಿಸಿದ ಗುರು, ಕಲಿತ ಶಾಲೆ ಹಾಗೂ ಪಟ್ಟಣಕ್ಕೆ ಕೀರ್ತಿ ತರಲು ಸಾಧ್ಯವಾಗುತ್ತದೆ ಎಂದರು.

ಅಧ್ಯಕ್ಷತೆಯನ್ನು ಬಾಲಲೀಲಾ ಮಾಹಾಂತ ಶಿವಯೋಗಿ ಶಿಕ್ಷಣ ಸಮಿತಿ ಅಧ್ಯಕ್ಷ ಎಂ.ಡಿ. ಬಟ್ಟೂರ ವಹಿಸಿದ್ದರು. ಸಂಗನಬಸವ ಎಸ್. ಗದ್ದಿ, ಡಾ. ಎಸ್.ಸಿ. ಚವಡಿ, ವಿಜಯ ನೀಲಗುಂದ, ಬಿ.ಸಿ. ಬಡ್ನಿ, ಎಂ.ಎಂ. ಅದರಗುಂಚಿ, ಫಕ್ಕೀರಯ್ಯ ಅಮೋಘಿಮಠ, ಪಿ.ಎ. ವಂಟಕರ, ಎಸ್.ಸಿ. ಕುರ್ತಕೋಟಿ, ಶ್ರೀನಿವಾಸ ಪಂಚಭಾವಿ, ವಿ.ಎಂ. ಕೊಪ್ಪಳ, ಇ.ಎಂ. ಗುಳೆದಗುಡ್ಡ, ಪ್ರಾಚಾರ್ಯ ಎ.ಎಂ. ಅಂಗಡಿ, ಶಿವಲೀಲಾ ಬಳಿಗೇರ, ರೇಣುಕಾ ಗುಡಗೇರಿ, ಶ್ರೀದೇವಿ ಗವಿಮಠ, ಸಂಗೀತಾ ಗುಂಜಳ ಇದ್ದರು.

# ವರದಿ ಸಲ್ಲಿಸದ ರಾಜ್ಯ ಸರ್ಕಾರ: ಖಂಡನೆ




■ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ತಾಲೂಕಾ ಸಾರ್ವಜನಿಕ ಹೋರಾಟ ವೇದಿಕೆಯ ವತಿಯಿಂದ ಗದಗ-ಹರಪನಹಳ್ಳಿ ರೈಲ್ವೆ ಮಾರ್ಗಕ್ಕೆ ರಾಜ್ಯ ಸರ್ಕಾರ ಅದರ ಸರ್ವೆ ವರದಿಯನ್ನು ಸಲ್ಲಿಸದೇ ಇರುವುದನ್ನು ಖಂಡಿಸಿ ಮುಂಡರಗಿ ತಹಸೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಸಂಚಾಲಕ ಬಸವರಾಜ ಯಲ್ಲಪ್ಪ ನವಲಗುಂದ ಮಾತನಾಡಿ, ಪ್ರತಿ ವರ್ಷವೂ ಕೇಂದ್ರ ಮುಂಗಡ ಪತ್ರದ ಮುಂಚಿತವಾಗಿ ಪ್ರಧಾನಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸುತ್ತಾ ಬಂದಿದ್ದೇವೆ. ನವದೆಹಲಿ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಮಾಡಿ ಮನವಿಪತ್ರ ಸಲ್ಲಿಸಿದ್ದೇವೆ.

ಪ್ರಧಾನ ಮಂತ್ರಿ ಕಾರ್ಯಾಲಯವು ನಮ್ಮ ಪ್ರತಿಭಟನೆಗೆ ಸ್ಪಂದಿಸಿದ್ದು, ರಾಜ್ಯ ಸರ್ಕಾರವು ಇಲ್ಲಿವರೆಗೂ ಕೂಡಾ ವರದಿ ನೀಡಿಲ್ಲ. ಈ ಜನವಿರೋಧಿ ನೀತಿಯನ್ನು ಖಂಡಿಸಿ ಮಾರ್ಚ್ 11ರಂದು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ಪ್ರಾರಂಭಿಸುವುತ್ತೇವೆ ಎಂದರು.

ಈ ಸಂದರ್ಭದಲ್ಲಿ ವ್ಹಿ.ಎಸ್. ಘಟ್ಟಿ, ಎಮ್.ಕೆ. ತಳಗಡೆ, ಸುಭಾಷ ಕುಂಬಾರ, ಮಂಜುನಾಥ ಹುಬ್ಬಳ್ಳಿ, ರಮೇಶ ರಾಮೇನಳ್ಳಿ, ಸಂಶುದ್ದೀನ್ ಡಂಬಳ, ರಾಜಾಬಕ್ಷಿ ಡಂಬಳ, ರಾಜಾಬಕ್ಷಿ ಅಳವಂಡಿ, ಬಸಪ್ಪ ತಿಮ್ಮಪ್ಪ ವಡ್ಡರ, ಯಲ್ಲಮ್ಮ ಚಿಕ್ಕಣ್ಣವರ, ಮಧುಮತಿ ಮಡಿವಾಳ ಮುಂತಾದವರು ಉಪಸ್ಥಿತರಿದ್ದರು.

# ಶರಣ ಮಡಿವಾಳ ಮಾಚಿದೇವರ ಜಯಂತಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಬೂದಿಹಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವೀರಘಂಟಿ ಮಡಿವಾಳ ಮಾಚಿದೇವರ ಜಯಂತಿಯನ್ನು ಮಾಚಿದೇವರ ವಿಶಿಷ್ಟ ವಚನಗಾಯನ ಸಿಂಚನದೊಂದಿಗೆ ಆಚರಿಸಲಾಯಿತು.

ಮುಖ್ಯೋಪಾಧ್ಯಾಯ ಡಾ.ಸಂಗಮೇಶ ತಮ್ಮನಗೌಡ್ರ ಮಾಚಿದೇವರ ಕುರಿತು ಮಾತನಾಡಿ, ಲಿಂಗನಿಷ್ಠೆ, ಕಾಯಕಪೂಜೆ, ಕಾಯಕಸೇವೆ ಮತ್ತು ಯೋಗಾಂಗ ತ್ರಿವಿಧಿ, ಜೀವನ ಚರಿತ್ರೆ ಹಾಗೂ ಅವರು ಬರೆದ ವಚನ ಸಾಹಿತ್ಯದ ಹಲವಾರು ವಿಚಾರಗಳನ್ನು ತಿಳಿಸಿದರು.

ಶಿಕ್ಷಕ ಚಂದ್ರಶೇಖರ ಕೇಸರಿ ಮಾತನಾಡಿ, ಸರ್ಕಾರ ಶರಣ ಮಡಿವಾಳ ಮಾಚಿದೇವರ ಜಯಂತಿ ಆಚರಣೆಗೆ ಆದೇಶ ಹೊರಡಿಸಿರುವುದು ಸಂತಸ ತಂದಿದೆ. 12ನೇ ಶತಮಾನದ ಬಸವಣ್ಣನವರ ಸಮಕಾಲೀನ ಶರಣರಲ್ಲಿ ಮಡಿವಾಳ ಮಾಚಿದೇವರು ಒಬ್ಬರು. ಅವರು ಕಾಯಕನಿಷ್ಠೆ, ದಾಸೋಹದಂತಹ ಮೌಲ್ಯಯುತವಾದ ಕಾಣಿಕೆ ನೀಡಿದ್ದು, 12ನೇ ಶತಮಾನದ ಕಾಲದಲ್ಲಿ ಇಂತಹ ಶರಣರು, ಮಹಾಪುರುಷರು ಹಾಕಿಕೊಟ್ಟ ಮಾರ್ಗದರ್ಶನ ಹಾಗೂ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.




ಇನ್ನೋರ್ವ ಶಿಕ್ಷಕ ಬಸವರಾಜ ದೇಸಾಯಿಪಟ್ಟಿ ಮಾತನಾಡಿ, ಮಡಿವಾಳ ಮಾಚಿದೇವರು ಬದುಕಿನ ಸಾತ್ವಿಕತೆ, ಸತ್ಯ ಶುದ್ಧ ಕಾಯಕದ ಮಾರ್ಗ ಹಾಕಿಕೊಟ್ಟವರಾಗಿದ್ದಾರೆ. ಸಮಾಜದಲ್ಲಿ ಜಾತಿ ಮುಖ್ಯವಲ್ಲ, ಜೀವನ ಮುಖ್ಯವೆಂದು ತೋರಿಸಿಕೊಟ್ಟಿದ್ದಾರೆ ಎಂದರು.

ಈ ವೇಳೆ ಮಡಿವಾಳ ಸಮಾಜದ ಮುಖಂಡ ಬಸವರಾಜ ಮಡಿವಾಳರ, ವೀರೇಶ ಮಡಿವಾಳರ, ಶರಣಪ್ಪ ಮಡಿವಾಳರ, ಎಸ್.ಡಿ.ಎಂ.ಸಿ ಸದಸ್ಯ ಚನ್ನಬಸಪ್ಪ ಮರಲಿಂಗಣ್ಣವರ, ನಿಂಗರಡ್ಡೆಪ್ಪ ಕರಮುಡಿ, ಹನುಮಪ್ಪ ಚಿಗರಿ ಉಪಸ್ಥಿತರಿದ್ದರು. ಶಿಕ್ಷಕ ಸಿ.ಕೆ. ಕೇಸರಿ ನಿರೂಪಿಸಿದರು. ಅತಿಥಿ ಶಿಕ್ಷಕಿ ಐಶ್ವರ್ಯ ಬಿಂಗಿ ವಂದಿಸಿದರು.

# ಕಲಿಕೆಯಲ್ಲಿ ಕಠಿಣ ಪರಿಶ್ರಮ ಅತ್ಯಗತ್ಯ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಮಯಪ್ರಜ್ಞೆ ಬಹಳ ಮುಖ್ಯ. ನಿರಂತರ ಅಧ್ಯಯನದಿಂದ ಗುರಿ ತಲುಪಲು ಸಾಧ್ಯ. ಯಾವುದೇ ಗುರಿ ತಲುಪಬೇಕಾದರೂ ಶ್ರದ್ಧೆ, ಸಂಯಮ ಹಾಗೂ ಕಠಿಣ ಪರಿಶ್ರಮ ಅತ್ಯಗತ್ಯ ಎಂದು ಶ್ರೀಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಎ.ಎ. ಪ.ಪೂ ಮಹಾವಿದ್ಯಾಲಯದ ಪ್ರಾಚಾರ್ಯ ವೈ.ಸಿ. ಪಾಟೀಲ ಹೇಳಿದರು.

ಅವರು ಪಟ್ಟಣದ ಅಭಿನವ ಅನ್ನದಾನೇಶ್ವರ ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದ 2023ನೇ ಸಾಲಿನ ವಿವಿಧ ಸಾಂಘಿಕ ಚಟುವಟಿಕೆಗಳ ಸಮಾರೋಪ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಶ್ರಮವಹಿಸಿ ಓದಬೇಕು. ಸತತವಾಗಿ ಅಧ್ಯಯನ ಮಾಡಿದಾಗ ಮಾತ್ರ ಜೀವನದಲ್ಲಿ ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯ. ತಾಳ್ಮೆ, ಸಂಯಮ ಎನ್ನುವ ಮೌಲ್ಯಗಳನ್ನು ಗಳಿಸಿಕೊಂಡು ವಿದ್ಯಾರ್ಥಿ ಜೀವನ ಸಾರ್ಥಕಪಡಿಸಿಕೊಳ್ಳಬೇಕು. ವಿದ್ಯಾರ್ಥಿ ಗಳು ಸಮಾಜಕ್ಕೆ ಬೆಳಕಾಗಬೇಕು, ಕಲಿಸಿದ ಗುರು-ಹಿರಿಯರು ಹಾಗೂ ವಿದ್ಯಾ ಸಂಸ್ಥೆಗಳಿಗೆ ಸದಾ ಋಣಿಯಾಗಿರಬೇಕು ಎಂದರು.

ಕಾಲೇಜಿನ ಚೇರಮನ್ ವೀರಣ್ಣ ಶೆಟ್ಟರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಅಳವಡಿಸಿಕೊಂಡರೆ ಭವಿಷ್ಯದ ಜೀವನದಲ್ಲಿ ಸಮಾಜಕ್ಕೆ ಬೆಳಕಾಗುವಲ್ಲಿ ಸಂದೇಹವಿಲ್ಲ. ವಿದ್ಯಾರ್ಥಿಗಳ ಜೀವನದಲ್ಲಿ ಸಿಗುವ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಂಡು ಜಗತ್ತೇ ತಿರುಗಿ ನೋಡುವಂತೆ ಸಾಧನೆ ಮಾಡಬೇಕು ಎಂದರು.

ಕಾರ್ಯಕ್ರಮವನ್ನು ಸಾಹಿತಿ ಬಸವರಾಜ ಶೀಲವಂತರ ಉದ್ಘಾಟಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಎನ್.ಆರ್. ಗೌಡರ, ಎಂ.ಪಿ. ತಳಬಾಳ, ಎಫ್.ಐ. ಕರಿದುರ್ಗಣ್ಣವರ, ಅಭಿನವ ಪಿಯು ಪ್ರಾಚಾರ್ಯೆ ಎಂ. ಅನಸೂಯಾ ಪಾಟೀಲ, ಆರ್.ಜಿ. ಪಾಟೀಲ, ಪ್ರಭು ಚವಡಿ ಸೇರಿದಂತೆ ವಿವಿಧ ಅಂಗಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಕ ವೃಂದ ಹಾಗೂ ಆಡಳಿತ ಮಂಡಳಿ ಸದಸ್ಯರು ಇದ್ದರು.

# ಆಯ್ದುಕೊಂಡ ಕಾಯಕದಲ್ಲಿ ನಿಷ್ಠೆಯಿರಲಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶರಣರು, ಸಂತರು, ದಾಸವರೇಣ್ಯರು ದೇವಮಾನವರಾಗಿ ಸಮಾಜದ ಕಲ್ಯಾಣಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡಿದ್ದಾರೆ. ಅವರ ವಿಚಾರ, ತತ್ವಾದರ್ಶಗಳು, ತೋರಿದ ಮಾನವೀಯತೆಯ ಮಾರ್ಗ ಸರ್ವಕಾಲಕ್ಕೂ ಆದರಣೀಯ ಎಂದು ಮಡಿವಾಳ ಸಮಾಜದ ಹಿರಿಯ ಮುಖಂಡ ನಿಂಬಣ್ಣ ಮಡಿವಾಳರ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಕಾಯಕನಿಷ್ಠ ಮಹಾಶರಣ ಮಡಿವಾಳ ಮಾಚಯ್ಯನವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಕಾಯಕವೇ ಕೈಲಾಸವಾಗಿದ್ದು ಯಾವುದೇ ಕೆಲಸ ಮೇಲಲ್ಲ, ಕೀಳೂ ಅಲ್ಲ. ಆಯ್ದುಕೊಂಡ ಕಾಯಕವನ್ನು ನಿಷ್ಠೆ, ಪ್ರಾಮಾಣಿಕತೆಯಿಂದ ನಿರ್ವಹಿಸಿ ಅದರಲ್ಲಿಯೇ ಆತ್ಮತೃಪ್ತಿ ಹೊಂದಬೇಕು. ಅನುಭವಕ್ಕಿಂತ ಅಮೃತವಿಲ್ಲ ಎಂಬಂತೆ ಶರಣರ ಅನಭವಾಮೃತದ ನುಡಿಗಳು ಸೂರ್ಯ-ಚಂದ್ರರಷ್ಟೇ ಸತ್ಯವಾಗಿದ್ದು, ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಎಲ್ಲರೂ ಸಾಗಬೇಕು. ಮಹಾಶರಣ ಮಡಿವಾಳ ಮಾಚಯ್ಯನವರು ಸಮಾಜದಲ್ಲಿನ ಅಜ್ಞಾನ, ಅಂಧಕಾರ, ಮೇಲು-ಕೀಳು ಭಾವನೆಯನ್ನು ಹೋಗಲಾಡಿಸಿ ಸತ್ಯ ಮತ್ತು ಕಾಯಕ ನಿಷ್ಠೆಯನ್ನು ಸಮಾಜದಲ್ಲಿ ಬಿತ್ತಿದರು.

ಕನ್ನಡ ಸಾರಸ್ವತ ಲೋಕಕ್ಕೆ ಮಾಚಿದೇವರ ಕೊಡುಗೆ ಅಪಾರವಾಗಿದ್ದು, ಪ್ರಸ್ತುತ ಮಡಿವಾಳ ಸಮಾಜದವರು ಶೈಕ್ಷಣಿಕ, ಆರ್ಥಿಕ, ರಾಜಕೀಯ ಎಲ್ಲ ರಂಗದಲ್ಲೂ ತೀರಾ ಹಿಂದುಳಿದಿದ್ದು ಸಮಾಜದ ಶ್ರೇಯೋಭಿವೃದ್ಧಿಗಾಗಿ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮಡಿವಾಳ ಮಾಚಿದೇವನ ಜಯಂತಿಯನ್ನು ಸರಕಾರದ ವತಿಯಿಂದ ಆಚರಿಸುತ್ತಿರುವುದು ಸ್ವಾಗತಾರ್ಹ ಎಂದರು.

ಈ ಸಂದರ್ಭದಲ್ಲಿ ಗ್ರೇಡ್-2 ತಹಸೀಲ್ದಾರ ಮಂಜುನಾಥ ಅಮಾಸಿ, ಉಪತಹಸೀಲ್ದಾರ ಪ್ರಶಾಂತ ಕಿಮಾಯಿ, ಮಡಿವಾಳ ಸಮಾಜದ ಶಾಂತಪ್ಪ ಮಡಿವಾಳರ, ಶಿವಣ್ಣ ಮಡಿವಾಳ, ಫಕ್ಕೀರೇಶ ಮಡಿವಾಳರ, ಮುತ್ತಪ್ಪ ಮಡಿವಾಳರ, ಹನುಮಂತಪ್ಪ ಮಡಿವಾಳರ, ಶ್ರೀಕಾಂತ ಮಡಿವಾಳರ, ಸಮಾಜದ ಮುಖಂಡರು ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು, ಸಾರ್ವಜನಿಕರು ಹಾಜರಿದ್ದರು.



■ವಿಜಯಸಾಕ್ಷಿ ಸುದ್ದಿ, ಧಾರವಾಡ

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು, ಧಾರವಾಡ ನಗರದ ಕೆಸಿಡಿ ಮೈದಾನಕ್ಕೆ ಗುರುವಾರ ಮಧ್ಯಾಹ್ನ ಭೇಟಿ ನೀಡಿ, ಫೆ.5ರಂದು ಧಾರವಾಡದಲ್ಲಿ ಆಯೋಜಿಸಲು ಉದ್ದೇಶಿಸಿರುವ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮದ ಸ್ಥಳ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಹಾಯಕ ಪೊಲೀಸ್ ಆಯುಕ್ತ ಪ್ರಶಾಂತ ಸಿದ್ದನಗೌಡರ, ಉಪವಿಭಾಗಾಧಿಕಾರಿ ಶಾಲಂ ಹುಸೇನ, ತಹಸೀಲ್ದಾರ ದೊಡ್ಡಪ್ಪ ಹೂಗಾರ, ಪಾಲಿಕೆ ಅಧಿಕಾರಿಗಳು ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಕ್ಕಳನ್ನು ಜವಾಬ್ದಾರಿಯಿಂದ ಪೋಷಿಸಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಸರ್ಕಾರದ ಮಹತ್ವಾ ಕಾಂಕ್ಷೆಯ 'ಕೂಸಿನ ಮನೆ' ನರೇಗಾ ಯೋಜನೆಯಡಿ ಅನುಷ್ಠಾನ ಗೊಳ್ಳುತ್ತಿದ್ದು, ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಜವಾಬ್ದಾರಿಯಿಂದ ಪೋಷಣೆ ಮಾಡುವ ಕರ್ತವ್ಯ ನಿಮ್ಮದಾಗಬೇಕೆಂದು ಸಹಾಯಕ ನಿರ್ದೇಶಕ (ಗ್ರಾ.ಉ) ಶಿವಕುಮಾರ ವಾಲಿ ಹೇಳಿದರು.

ಅವರು ಶಿರಹಟ್ಟಿ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ತಾ.ಪಂ ಶಿರಹಟ್ಟಿ, ಗ್ರಾ.ಪಂ ಹೆಬ್ಬಾಳ ಸಹಯೋಗದಲ್ಲಿ ಜರುಗಿದ ಕೂಸಿನ ಮನೆ ಆರೈಕೆದಾರರಿಗೆ ಕೊನೆಯ ದಿನದ ಪ್ರಾಯೋಗಿಕ ತರಬೇತಿಯಲ್ಲಿ ಮಾತನಾಡಿದರು.



ಈ ಸಂದರ್ಭದಲ್ಲಿ ಲಲಿತಾ ಅಳವಂಡಿ, ವೀರಬದ್ರಪ್ಪ ಸಜ್ಜನ, ರೇಣುಕಾ ಹುಲ್ಲೂರ ಆರೈಕೆದಾರರಿಗೆ ಮಾಹಿತಿ ನೀಡಿದರು. ಟಿಇಸಿ ಸಂಯೋಜಕ ಮಂಜುನಾಥ ಸ್ವಾಮಿ, ಪಿಡಿಓ ಸಂಜೀವ್ ಪಾಟೀಲ, ಗ್ರಾ.ಪಂ ಅಧ್ಯಕ್ಷ ಫಕ್ಕೀರಪ್ಪ ನರಸಮ್ಮನವರ, ಗ್ರಾ.ಪಂ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆರೈಕೆದಾರರು ಉಪಸ್ಥಿತರಿದ್ದರು.

# ಅಭಿವೃದ್ಧಿಪರ ನಿರ್ಧಾರದ ಬಜೆಟ್: ಡಾ. ಮಹೇಶ ನಾಲವಾಡ



■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಮಧ್ಯಂತರ ಮುಂಗಡಪತ್ರದ ಮೂಲಕ ಕೃಷಿ, ರಕ್ಷಣೆ, ನಾರಿಶಕ್ತಿ, ರೈಲ್ವೆ, ಆರ್ಥಿಕತೆ ಸೇರಿದಂತೆ ಎಲ್ಲಾ ವಲಯಗಳಲ್ಲಿ ದೇಶವನ್ನು ವಿಕಸಿತಗೊಳಿಸುವ ಸಂಕಲ್ಪದೊಂದಿಗೆ ಯೋಜನೆ ರೂಪಿಸಿದೆ ಎಂದು ನಾಲವಾಡ ಪ್ರತಿಷ್ಠಾನದ ಡಾ. ಮಹೇಶ ನಾಲವಾಡ ತಿಳಿಸಿದ್ದಾರೆ.

ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಮಂಡಿಸಿದ ಕೇಂದ್ರ ಬಜೆಟ್-2024 ಸ್ವಾಗತಾರ್ಹವಾಗಿದೆ. ಈ ಮಧ್ಯಂತರ ಮುಂಗಡ ಪತ್ರದಲ್ಲಿ ಬರಲಿರುವ ಚುನಾವಣೆಯನ್ನು ಗಣನೆಗೆ ತೆಗೆದುಕೊಳ್ಳದೇ, ದೀರ್ಘ ಕಾಲದಲ್ಲಿ ದೇಶಕ್ಕೆ ಹಣಕಾಸಿನ ಭದ್ರತೆ ಮತ್ತು ಅಭಿವೃದ್ಧಿಪರ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಮೂಲಭೂತ ಸೌಕರ್ಯಗಳಿಗೆ 11.11 ಲಕ್ಷ ಕೋಟಿ ರೂ. ಹಂಚಿಕೆ ಆಗಿರುವುದು ಒಂದು ಐತಿಹಾಸಿಕ ಬೆಳವಣಿಗೆ. ರಸ್ತೆ, ರೈಲು ಮತ್ತು ವಿಮಾನಯಾನ ಕ್ಷೇತ್ರಗಳಿಗೆ ಈ ಹಂಚಿಕೆ ಮೂಲಕ ಸಾಕಷ್ಟು ಪ್ರಾಮುಖ್ಯತೆ ನೀಡಿರುವುದು ಮಹತ್ತರವಾದ ಬೆಳವಣಿಗೆ. ಹಸಿರು ಶಕ್ತಿ, ಪರಿಸರ ಸ್ನೇಹಿ ಸುಧಾರಣೆಗಳನ್ನು ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ.

ನರೇಂದ್ರ ಮೋದಿ ನೇತೃತ್ವದ ಭಾಜಪ ಸರ್ಕಾರ ಸರ್ವರ ಜೊತೆ, ಸರ್ವರ ಅಭಿವೃದ್ಧಿ ಮತ್ತು ಸರ್ವರ ವಿಶ್ವಾಸ ಎಂಬ ಧ್ಯೆಯವಾಕ್ಯದೊಂದಿಗೆ ಹೊಸ ವಿಕಸಿತ ಭಾರತ ನಿರ್ಮಾಣದತ್ತ ಹೆಜ್ಜೆ ಹಾಕಿದೆ. ಜುಲೈ 2024ಕ್ಕೆ ಮತ್ತೆ ಮೋದಿ ಸರ್ಕಾರ ಪೂರ್ಣಪ್ರಮಾಣದ ಮುಂಗಡ ಪತ್ರವನ್ನೂ ಮಂಡಿಸುವುದು ಖಚಿತವಾಗಿದ್ದು, ತೆರಿಗೆ ಹಾಗೂ ಇತರ ಸುಧಾರಣೆಗಳನ್ನು ನಾವು ನಿರೀಕ್ಷೆ ಮಾಡಬಹುದು ಎಂದು ಡಾ. ಮಹೇಶ ನಾಲವಾಡ ಅಭಿಪ್ರಾಯಪಟ್ಟಿದ್ದಾರೆ.

# ಕೇಂದ್ರದಿಂದ ಸ್ವಾಗತಾರ್ಹ ಬಜೆಟ್: ರಾಜು ಕುರಡಗಿ



■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಮಂತ್ರಕ್ಕೆ ಶಕ್ತಿ ನೀಡುವ ರೀತಿಯಲ್ಲಿ ಈ ಸಲದ ಮಧ್ಯಂತರ ಬಜೆಟ್ ಮಂಡನೆ ಮಾಡಿರುವದು ಸ್ವಾಗತಾರ್ಹ ಎಂದು ಬಿಜೆಪಿ ಗದಗ ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರಡಗಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ನಾರಿಶಕ್ತಿಯ ಸ್ವಾಭಿಮಾನದ ಸ್ವಾವಲಂಬನೆಗೆ ಲಖ್‌ಪತಿ ದೀದಿ ಯೋಜನೆ, ಶಿಕ್ಷಣ, ದಲಿತರಿಗೆ, ಕೃಷಿ, ರಕ್ಷಣಾ, ರೈಲ್ವೆ, ಮಹಿಳೆಯರು, ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ತೆಗೆದಿರಸಲಾಗಿದ್ದು, ಎಲ್ಲ ವರ್ಗದ ಜನರಿಗೂ ಈ ಬಜೆಟ್ ಶಕ್ತಿಯಾಗಿದೆ. 44.90 ಲಕ್ಷ ಕೋಟಿ ಬಜೆಟ್ ಇದಾಗಿದೆ.

ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಆಯುಷ್ಮಾನ್ ಯೋಜನೆ, ವಿಮಾನಯಾನ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ, ಹೊಸ ಹೆದ್ದಾರಿಗಳಿಗೆ ನೀಲನಕ್ಷೆ, ವಿದ್ಯುತ್ ಉತ್ಪಾದನೆ, ಲಕ್ಷದ್ವೀಪ ಅಭಿವೃದ್ಧಿಗೆ ಹೆಚ್ಚಿನ ಮಹತ್ವ, 7 ಲಕ್ಷ ಆದಾಯ ಇರುವವರಿಗೆ ತೆರಿಗೆ ವಿನಾಯಿತಿ, 49 ಸಾವಿರ ರೈಲ್ವೆ ಬೋಗಿಗಳ ಉನ್ನತೀಕರಣ, 3 ರೈಲ್ವೆ ಕಾರಿಡಾರ್‌ಗಳ ನಿಮಾಣ, ಸಣ್ಣ ನಗರಗಳಿಗೂ ಮೆಟ್ರೋ ವಿಸ್ತರಣೆ, ಮೀನುಗಾರಿಕೆಗೆ ಉತ್ತೇಜನ ಸೇರಿದಂತೆ ಇನ್ನೂ ಹಲವಾರು ಯೋಜನೆಗಳನ್ನು ದೇಶದ ಜನರಿಗೆ ನೀಡಿರುವದು ಸ್ವಾಗತಾರ್ಹ ಎಂದು ರಾಜು ಕುರಡಗಿ ತಿಳಿಸಿದ್ದಾರೆ.

# ಅತ್ಯುತ್ತಮ ಬಜೆಟ್



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕೇಂದ್ರ ಸರಕಾರದ 2024-25ನೇ ಸಾಲಿನ ಮುಂಗಡಪತ್ರವನ್ನು ಮಂಡಿಸಿರುವ ನಿರ್ಮಲಾ ಸೀತಾರಾಮನ್ ಅವರು ಆರ್ಥಿಕ ಪ್ರಗತಿಗೆ ಒತ್ತು ನೀಡಿ ಬಜೆಟ್ ಸಿದ್ಧಪಡಿಸಿದ್ದಾರೆ ಎಂದು ಬಿಜೆಪಿಯ ಹಿರಿಯ ಮುಖಂಡ, ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ಹರ್ಷ ವ್ಯಕ್ತಪಡಿಸಿದ್ದಾರೆ.

ದೂರದೃಷ್ಟಿಯನ್ನಿಟ್ಟುಕೊಂಡು ಮಂಡಿಸಿರುವ ಬಜೆಟ್‌ನಲ್ಲಿ ಕೃಷಿಗೆ ಆದ್ಯತೆ, ಮಧ್ಯಮ ವರ್ಗದವರಿಗೆ ತೆರಿಗೆ ರಿಯಾಯತಿ ನೀಡಿರುವು, ಕರ್ನಾಟಕಕ್ಕೆ ವಿಶೇಷ ಆದ್ಯತೆ ಮೇರೆಗೆ ಅನುದಾನ, ನೀರಾವರಿ ಯೋಜನೆ, ಕೈಗಾರಿಕೆಗಳಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಮಂಡಿಸಿರುವ ಶ್ರೇಷ್ಠ ಬಜೆಟ್ ಇದಾಗಿದೆ ಎಂದಿದ್ದಾರೆ.

**ಕಾನಿಪ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಸನ್ಮಾನಿಸಿದ ಮಂಜುನಾಥ್ ಅಬ್ಬಿಗೇರಿ**

# ಬೇಡಿಕೆ ಈಡೇರಿಕೆಗೆ ಸಂಪಾದಕರು ಸಂಘಟಿತರಾಗೋಣ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಹಾಗೂ ಪ್ರಾದೇಶಿಕ ದಿನಪತ್ರಿಕೆಗಳು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿವೆ. ನಮ್ಮ ಬೇಡಿಕೆ ಈಡೇರಿಕೆಗೆ ಎಲ್ಲ ಸಂಪಾದಕರು ಸಂಘಟಿತರಾಗಬೇಕು ಎಂದು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಉಪಾಧ್ಯಕ್ಷ ಮಂಜುನಾಥ ಅಬ್ಬಿಗೇರಿ ಹೇಳಿದರು.

ಅವರು ಸಂಘದ ಸಭೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪ್ರಶಸ್ತಿಗೆ ಆಯ್ಕೆಯಾದ ಜಿಲ್ಲೆಯ ಪತ್ರಕರ್ತರನ್ನು ಸನ್ಮಾನಿಸಿ ಮಾತನಾಡಿದರು.

ಈಗಾಗಲೇ ಸಂಘದಿಂದ ಸಂಪಾದಕರ ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಇಲಾಖೆ ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಗಿದ್ದು, ಸಂಘಕ್ಕೆ ಹೆಚ್ಚಿನ ಶಕ್ತಿ ತುಂಬಲು ಸಂಪಾದಕರು ಸಂಘಟಿತರಾಗೋಣ ಎಂದು ಹೇಳಿದರು.

ಜಿಲ್ಲಾಧ್ಯಕ್ಷ ನೂರಅಹ್ಮದ್ ಮಕಾನದಾರ ಮಾತನಾಡಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಈ ಬಾರಿ ಗದಗ ಜಿಲ್ಲೆಯಿಂದ ಇಬ್ಬರು ಪತ್ರಕರ್ತರಿಗೆ ಪ್ರಶಸ್ತಿ ಲಭಿಸಿದ್ದು, ಸಂತಸ ತಂದಿದೆ. ಪತ್ರಕರ್ತರಾದ ವೆಂಕಟೇಶ್ ಇಮರಾಪೂರ ಹಾಗೂ ಮಹಾಂಗಳಿರಾಯ ಪೂಜಾರ್ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದು ಹೆಮ್ಮೆ ತಂದಿದೆ ಎಂದರು.

ಈ ಸಂದರ್ಭದಲ್ಲಿ ಶ್ರೀ ಬದರಿನಾಥ ಹೊಂಬಾಳಿ ಪ್ರಶಸ್ತಿಗೆ ಆಯ್ಕೆಯಾದ ವೆಂಕಟೇಶ್ ಇಮರಾಪೂರ ಹಾಗೂ ಯಜಮಾನ್ ಟಿ. ನಾರಾಯಣಪ್ಪ ಪ್ರಶಸ್ತಿಗೆ ಆಯ್ಕೆಯಾದ ಮಹಾಳಿಂಗರಾಯ್ ಪೂಜಾರ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಜಿಲ್ಲಾ ಉಪಾಧ್ಯಕ್ಷ ಎನ್.ಆರ್. ಭಾಂಡಗೆ, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಅಜಿತ್ ಹೊಂಬಾಳಿ, ಎಚ್. ಎಂ. ಶರೀಫನವರ್, ಕಾನಿಪ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ, ಜಗದೀಶ್ ಪೂಜಾರ್, ಎಮ್.ಜಿ. ಕುಲಕರ್ಣಿ, ಮೌನೇಶ್ ಬಡಿಗೇರ, ಚನ್ನಯ್ಯ ಹಿರೇಮಠ, ಮಂಜು ಜಡಿ, ಸುಭಾಸ್ ಮಳಗಿ, ಕಿರಣ ಕೆಂಚಗುಂಡಿ, ಹುಸೇನ್ ನದಾಫ್, ನಾಗರಾಜ್ ರಾಹುತ್, ಹರೀಶ್ ಬೆಲೇರಿ, ಪರಶುರಾಮ್ ಬಾರಕೇರ, ಈರಣ್ಣ ಮೂರಶಿಳ್ಳಿನ ಸೇರಿದಂತೆ ಇತರರು ಇದ್ದರು.

# ತಮಿಳುನಾಡಿಗೆ ಸಧ್ಯಕ್ಕೆ ನೀರು ಬಿಡುಗಡೆ ಇಲ್ಲ!

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇರುವ ಹಿನ್ನೆಲೆಯಲ್ಲಿ ತಮಿಳುನಾಡಿಗೆ ಕಾವೇರಿ ನೀರು ಹರಿಸಲು ಸಾಧ್ಯವಿಲ್ಲ ಎಂಬ ಕರ್ನಾಟಕದ ಮನವಿಯನ್ನು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಪುರಸ್ಕರಿಸಿದೆ.

ಎರಡೂ ರಾಜ್ಯಗಳಲ್ಲಿನ ಜಲಾಶಯಗಳಲ್ಲಿನ ಉಪಯುಕ್ತ ಸಂಗ್ರಹಣೆಯನ್ನು ಪರಿಗಣಿಸಿದ ಸಿಡಬ್ಲ್ಯುಎಂಎ-ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ, ಕರ್ನಾಟಕದಿಂದ ನೀರು ಬಿಡುಗಡೆಗೆ ಯಾವುದೇ ನಿರ್ದೇಶನ ನೀಡಿಲ್ಲ. ದೆಹಲಿಯಲ್ಲಿ ಗುರುವಾರ ನಡೆದ ಸಿಡಬ್ಲ್ಯುಎಂಎ ಸಭೆಯಲ್ಲಿ ಕರ್ನಾಟಕ ಅಧಿಕಾರಿಗಳು, ರಾಜ್ಯದ ಜಲಾಶಯಗಳ ಸದ್ಯದ ಸ್ಥಿತಿಯನ್ನು ಪ್ರಾಧಿಕಾರದ ಗಮನಕ್ಕೆ ತಂದಿದ್ದಾರೆ.

**ಪುರಸಭೆಯ ಸದಸ್ಯರಿಂದ ಅಧಿಕಾರ ದುರುಪಯೋಗದ ಆರೋಪ**

# ಕಾನೂನು ಕ್ರಮಕ್ಕೆ ಕರವೇ ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಪುರಸಭೆಯಲ್ಲಿನ ನಾಲ್ವರು ಸದಸ್ಯರು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದು, ಈ ಹಿಂದೆ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ನೀಡಲಾಗಿದ್ದ ಮನವಿಗೂ ಸಹ ಯಾವುದೇ ಸ್ಪಂದನೆ ನೀಡಿಲ್ಲ. ಕೂಡಲೇ ಈ ನಾಲ್ವರು ಸದಸ್ಯರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣಶೆಟ್ಟಿ ಬಣ) ಕಾರ್ಯಕರ್ತರು ಗುರುವಾರ ಪುರಸಭೆಗೆ ತೆರಳಿ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಅವರನ್ನು ಆಗ್ರಹಿಸಿ, ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣಶೆಟ್ಟಿ ಬಣದ ತಾಲೂಕಾಧ್ಯಕ್ಷ ಮಹೇಶ ಕಲಘಟಗಿ ಮಾತನಾಡಿ, ಪುರಸಭೆಯ 1ನೇ ವಾರ್ಡ್‌ನ ಸದಸ್ಯೆಯೋರ್ವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು, ಅವರು ತಮ್ಮ ಸ್ವಂತ ಜಾಗೆಯಲ್ಲಿ ಪುರಸಭೆ ಕಾಮಗಾರಿಗೆ ಸಂಬಂಧಿಸಿದ 60-70 ಟ್ರ್ಯಾಕ್ಟರ್ ಕಲ್ಲು, 200 ಗಾಡಿಯಷ್ಟು ಮಣ್ಣನ್ನು ಅನಧಿಕೃತವಾಗಿ ಸಂಗ್ರಹಿಸಿದ್ದು, ಇದನ್ನು ಮುಖ್ಯಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಬೇಕೆಂದು ಆಗ್ರಹಿಸಿದರು.


ಈ ಬಗ್ಗೆ ಪುರಸಭೆಯಿಂದ ಯಾರೂ ಗಮನ ಹರಿಸದಿರುವದಕ್ಕೆ ಕಾರಣವೇನು ಎಂದು ಪ್ರಶ್ನಿಸಿದ ಅವರು, ಕರೆಗೋರಿ ಮತ್ತು ಜಿ.ಎಸ್. ಗಡ್ಡದೇವರಮಠ ನಗರಗಳಲ್ಲಿ ಬಡವರಿಗೆ ಹಂಚಬೇಕಾಗಿದ್ದ ನಿವೇಶನವನ್ನು ಸಂಬಂಧಿಕರಿಗೆ ನೀಡಿ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದು, ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಸಂಘಟನೆಯ ಕಾರ್ಯಕರ್ತರು ಮುಖ್ಯಾಧಿಕಾರಿಗಳ ಸಮಕ್ಷಮದಲ್ಲಿ ಪುರಸಭೆಗೆ ಸಂಬಂಧಿಸಿದ ಕಲ್ಲು, ಮಣ್ಣನ್ನು ಅನಧಿಕೃತವಾಗಿ ಸ್ವಂತ ಜಾಗೆಯಲ್ಲಿ ಸಂಗ್ರಹಿಸಿರುವ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಈ ಹಂತದಲ್ಲಿ ಪುರಸಭೆಯ ಇನ್ನುಳಿದ ಮೂವರು ಸದಸ್ಯರ ಮೇಲೆಯೂ ಸಂಘಟನೆಯವರು ಆರೋಪ ಮಾಡಿದ್ದು, ಸೂಕ್ತ ಕ್ರಮಕ್ಕಾಗಿ ಆಗ್ರಹಿಸಿದರು. ಅಧಿಕಾರ ದುರುಪಯೋಗ ಪಡಿಸಿಕೊಂಡ ಈ ಸದಸ್ಯೆ ಸೇರಿ ಇನ್ನು ಮೂರು ಜನ ಪುರಸಭೆ ಸದಸ್ಯರ ವಿರುದ್ಧ ಜಿಲ್ಲಾಧಿಕಾರಿಗೆ ಕಳೆದ ಡಿ.12 2023ರಂದು ಮನವಿ ಸಲ್ಲಿಸಲಾಗಿತ್ತು. ಇದರ ಬಗ್ಗೆ ಜಿಲ್ಲಾ ಯೋಜನಾ ನಿರ್ದೇಶಕರು, ಪುರಸಭೆ ಮುಖ್ಯಾಧಿಕಾರಿಗೆ ವರದಿ ಸಲ್ಲಿಸಲು ಸೂಚಿಸಿದ್ದರೂ ಪುರಸಭೆ ಅಧಿಕಾರಿಗಳು ಇದುವರೆಗೂ ವರದಿ ಸಲ್ಲಿಸಿಲ್ಲ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಮಂಜುನಾಥ ಗಾಂಜಿ, ಪ್ರವೀಣ ದಶಮನಿ, ಶ್ರೇಯಾಂಕ ಹಿರೇಮಠ, ಚಂದ್ರು ಪಾಣಿಗಟ್ಟಿ, ಮಲ್ಲನಗೌಡ ಪಾಟೀಲ, ಸಹಿಬಲಾಲ್ ಕಲೆಗಾರ, ನಾಶೀರಖಾನ್ ಕಿತ್ತೂರ, ಸಕ್ರಪ್ಪ ಲಮಾಣಿ, ಸುಷ್ಮಾ ಸರ್ವದೆ, ಸೌಮ್ಯ ಹಗರದ, ಲತಾ ಅಕ್ಕಸಾಲಿಗ, ಕಾವ್ಯಾ ಬದಾಮಿ, ಶಿವಲೀಲಾ ಸುಂಕದ, ಗಂಗಮ್ಮ ಬಡಿಗೇರ, ನೇತ್ರಾವತಿ ಸುತಾರ, ಪವಿತ್ರಾ ಉದ್ದನಗೌಡ್ರ, ತೇಜಸ್ವಿನಿ ಗುರಪ್ಪಗೌಡರ ಇದ್ದರು.

> ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಮಣಿದು ಸುಮ್ಮನಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ, ಇನ್ನೆರಡು ದಿನಗಳಲ್ಲಿ ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಪುರಸಭೆ ಎದುರು ಸತ್ಯಾಗ್ರಹ ಪ್ರಾರಂಭಿಸುವದಾಗಿ ಸಂಘಟನೆಯ ಪದಾಧಿಕಾರಿಗಳು ಎಚ್ಚರಿಕೆ ನೀಡಿದರು. ಪುರಸಭೆ ಮುಖ್ಯಾಧಿಕಾರಿಗಳು ಪ್ರತಿಕ್ರಿಯಿಸಿ, ಮೇಲಾಧಿಕಾರಿಗಳಿಗೆ ಈ ವಿಷಯದ ಕುರಿತು ತಿಳಿಸಿ, ಅವರ ನಿರ್ದೇಶನದಂತೆ ಕ್ರಮ ಕೈಗೊಳ್ಳುವದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಕೈಬಿಡಲಾಯಿತು.

# ಚುನಾವಣೆ ದೃಷ್ಟಿಯ ಬಜೆಟ್




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಈ ವರ್ಷದ ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಯಾವುದೇ ಉತ್ತೇಜನ ನೀಡಿಲ್ಲ. ರೈತರ ಆದಾಯ ಹೆಚ್ಚಳದ ಬಗ್ಗೆ ಬಜೆಟ್‌ನಲ್ಲಿ ಸರಿಯಾದ ನಿರ್ಧಾರಗಳಿಲ್ಲ ಎಂದು ಮಾಜಿ ಶಾಸಕ ಹಾಗೂ ರಾಜ್ಯ ಉಗ್ರಾಣ ನಿಗಮದ ಮಾಜಿ ಅಧ್ಯಕ್ಷ ಜಿ.ಎಸ್. ಗಡ್ಡದೇವರಮಠ ನಿರಾಸೆ ವ್ಯಕ್ತಪಡಿಸಿದ್ದಾರೆ.

ನಿರುದ್ಯೋಗ ನಿವಾರಣೆಗೂ ಸಹ ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ. ಮುಂಬರುವ ಲೋಕಸಭಾ ಚುನಾವಣೆಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಮಂಡಿಸಿರುವ ಬಜೆಟ್ ಇದಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ಇದು ಬಂಡವಾಳಶಾಹಿಗಳ ಬಜೆಟ್



■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರದ ಮಧ್ಯಂತರ ಬಜೆಟ್ ಗುರುವಾರ ಮಂಡನೆಯಾಗಿದ್ದು, ಎಲ್ಲವೂ ನಿರಾಶದಾಯಕವಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ವಿಶೇಷವಾಗಿ ಯಾವುದೇ ಯೋಜನೆಗಳನ್ನು ಘೋಷಿಸಿಲ್ಲ. ಹಳೆ ಯೋಜನೆಗೆ ಲಕ್ಷತಿ ದೀದಿ ಅಂತ ಹೆಸರಿಟ್ಟಿದ್ದಾರೆ. ರೈತರಿಗೆ, ಕೂಲಿ ಕಾರ್ಮಿಕರಿಗೆ, ಬಡವರಿಗೆ ಈ ಬಜೆಟ್‌ನಿಂದ ಯಾವುದೇ ರೀತಿಯಿಂದ ಆರ್ಥಿಕ ಹೊರೆ ಕಡಿಮೆಯಾಗದು ಎಂದು ಕೆಪಿಸಿಸಿ ಗದಗ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಉಮರ್ ಫಾರೂಕ್ ಹುಬ್ಬಳ್ಳಿ ಹೇಳಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ದರ, ದಿನಸಿ ದರ ಯಾವುದೇ ರೀತಿಯಿಂದಲೂ ಕಡಿಮೆಯಾಗುವುದಿಲ್ಲ. ಯುವಕರಿಗೆ ಉದ್ಯೋಗ ಸೃಷ್ಟಿಯಾಗುವ ಯೋಜನೆಯೂ ಇಲ್ಲದೆ, ಕೇವಲ ಬಂಡವಾಳಶಾಹಿಪರ ಬಜೆಟ್ ಆಗಿದೆ. ಇದು ಕೇವಲ 2024ನೇ ಸಾಲಿನ ಲೋಕಸಭೆ ಚುನಾವಣೆ ಪೂರಕ ಬಜೆಟ್ ಆಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ಸ್ಟಾರ್ಟ್ ಅಪ್‌ಗಳಿಗೆ ತೆರಿಗೆ ಸೌಲಭ್ಯ ವಿಸ್ತರಣೆ ಪ್ರಸ್ತಾಪ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಮಂಡಿಸಿರುವ ಮಧ್ಯಂತರ ಬಜೆಟ್‌ನಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ತೆರಿಗೆ ಪ್ರಯೋಜನಗಳ ವಿಸ್ತರಣೆಯನ್ನು ಪ್ರಸ್ತಾಪಿಸಿದ್ದಾರೆ. ಸಾರ್ವಭೌಮ ಸಂಪತ್ತು ನಿಧಿಗಳಿಂದ ಮಾಡಿದ ಹೂಡಿಕೆಯನ್ನು ಈಗ ಮಾರ್ಚ್ 31, 2025 ರವರೆಗೆ ಒಂದು ವರ್ಷ ವಿಸ್ತರಿಸಲಾಗಿದೆ. ಸ್ಟಾರ್ಟ್ ಅಪ್‌ಗಳಿಗೆ ಇದು ವರದಾನವಾಗಿದೆ ಎನ್ನಬಹುದು.

ಲಾಭದಾಯಕ ನೀತಿಗಳು ಮತ್ತು ಸ್ನೇಹಿ ಸಾಂಸ್ಥಿಕ ಹೂಡಿಕೆದಾರರ ನೀತಿಗಳ ಮುಂದುವರಿಕೆಯನ್ನು ಇದು ಸೂಚಿಸುತ್ತದೆ ಎಂದು ಸೀಫಂಡ್‌ನ ಸಹ-ಸಂಸ್ಥಾಪಕ ಮತ್ತು ವ್ಯವಸ್ಥಾಪಕ ಪಾಲುದಾರ ಮಯೂರೇಶ್ ರಾವುತ್ ಅಭಿಪ್ರಾಯಪಟ್ಟಿದ್ದಾರೆ.

# ಜನ ಕಲ್ಯಾಣಕ್ಕೆ ಆದ್ಯತೆ ನೀಡಿದ ಬಜೆಟ್



■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರದ ಅರ್ಥ ಸಚಿವೆ ನಿರ್ಮಲಾ ಸಿತಾರಾಮನ್ ಮಂಡಿಸಿದ 2024ರ ಮಧ್ಯಂತರ ಬಜೆಟ್‌ನಲ್ಲಿ ಯುವಕರು, ಮಹಿಳೆಯರು, ರೈತರು ಹಾಗೂ ಬಡವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಗದಗ ಜಿಲ್ಲಾ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ, ಹಿರಿಯ ನ್ಯಾಯವಾದಿ ಎಂ.ಎಂ. ಹಿರೇಮಠ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಸಬ್ ಕಾ ಸಾತ್-ಸಬ್ ಕಾ ವಿಕಾಸ್' ಧ್ಯೇಯದಡಿ ಪ್ರತಿಯೊಬ್ಬರಿಗೂ ಸರ್ಕಾರದ ಯೋಜನೆಗಳನ್ನು ತಲುಪಿಸಿ, 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನಾಗಿ ಮಾಡುವದು, ಆರೋಗ್ಯ, ಶಿಕ್ಷಣ, ಕೃಷಿ, ರಕ್ಷಣಾ, ರೈಲ್ವೆ, ಮಹಿಳೆಯರು, ದಲಿತರಿಗೆ ಹೆಚ್ಚಿನ ಅನುದಾನ ತೆಗೆದಿರಿಸಲಾಗಿದ್ದು, ಎಲ್ಲ ವರ್ಗದ ಜನರಿಗೂ ಈ ಬಜೆಟ್ ಶಕ್ತಿ ತುಂಬಿದೆ. 44.90 ಲಕ್ಷ ಕೋಟಿ ಬಜೆಟ್ ಮಂಡಿಸಿದ ಕೇಂದ್ರದ ಅರ್ಥ ಸಚಿವೆ ನಿರ್ಮಲಾ ಸಿತಾರಾಮನ್ ಹಾಗೂ ದೇಶದ ಅಭಿವೃದ್ಧಿಯ ಹರಿಕಾರ ಪ್ರಧಾನಿ ನರೇಂದ್ರ ಮೋದಿಯವರಿಗೂ ಇಂತಹ ಒಳ್ಳೆಯ ಬಜೆಟ್ ಮಂಡಿಸಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿ, ಬಜೆಟ್‌ನ್ನು ಸ್ವಾಗತಿಸಿದ್ದಾರೆ.

# ನಿವೃತ್ತ ಸೈನಿಕನಿಗೆ ಭವ್ಯ ಸ್ವಾಗತ



■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತಮಾತೆಯ ಹೆಮ್ಮೆಯ ಪುತ್ರ, ಲಕ್ಕುಂಡಿ ಗ್ರಾಮದ ನಾಯಕ್ ರುದ್ರಪ್ಪ ಮಾರನಬಸರಿ ಇವರು ಭಾರತೀಯ ಸೇನೆಯಲ್ಲಿ 22 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಪಡೆದು ತಾಯ್ನಾಡಿಗೆ ಆಗಮಿಸಿದ ಸಂದರ್ಭದಲ್ಲಿ ಗುರುವಾರ ಗದುಗಿನ ರೈಲ್ವೆ ನಿಲ್ದಾಣದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಗದಗ ಜಿಲ್ಲಾ ಘಟಕದ ವತಿಯಿಂದ ಆತ್ಮೀಯವಾಗಿ ಸ್ವಾಗತಿಸಿದರು.

ಸಂಘದ ಅಧ್ಯಕ್ಷ ಬಸಲಿಂಗಪ್ಪ ಮುಂಡರಗಿ ಅವರ ನೇತೃತ್ವದಲ್ಲಿ ಎಲ್ಲಾ ಪದಾಧಿಕಾರಿಗಳು, ಸರ್ವ ಸದಸ್ಯರ, ಎಲ್ಲಾ ವೀರನಾರಿಯರ ಮತ್ತು ಅರೆಸೇನಾಪಡೆಗಳ ಯೋಧರ ಸಹಯೋಗದೊಂದಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಸಲಿಂಗಪ್ಪ ಮುಂಡರಗಿ ಮಾತನಾಡಿ, ಸೈನಿಕರ ಸೇವೆಯನ್ನು ಎಷ್ಟು ಹೊಗಳಿದರೂ ಸಾಲದು. ಗದಗ ಜಿಲ್ಲೆಯಲ್ಲಿ ಪ್ರತಿ ಮನೆಗೊಬ್ಬ ಸೈನಿಕನು ಹುಟ್ಟಬೇಕೆಂಬುದೇ ನಮ್ಮ ಸಂಘದ ಆಸೆಯಾಗಿದೆ. ನಿವೃತ್ತಿ ಪಡೆದು ಬರುವಂತ ಸೈನಿಕರನ್ನು ಸ್ವಾಗತ ಮಾಡಿಕೊಳ್ಳವದರಿಂದ ಜನರ ಮೇಲೆ ಹಾಗೂ ಯುವಕರ ಮನಸ್ಸಿನ ಮೇಲೆ ದೇಶಪ್ರೇಮದ ಪರಿಣಾಮ ಬೀರುತ್ತದೆ ಎಂದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಗದಗ ಜಿಲ್ಲಾ ಪದಾಧಿಕಾರಿಗಳು, ವೀರನಾರಿಯರ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಸೈನಿಕನ ಧರ್ಮಪತ್ನಿ ಹಾಗೂ ಮಾತೋಶ್ರೀಯವರು, ಲಕ್ಕುಂಡಿ ಗ್ರಾಮದ ಗುರು-ಹಿರಿಯರು ಉಪಸ್ಥಿತರಿದ್ದರು.

# ರೋಟರಿ ಸೆಂಟ್ರಲ್ ವತಿಯಿಂದ ಸನ್ಮಾನ




■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೇಟಗೇರಿಯ ಮರ್ಚಂಟ್ಸ್ ಲಿಬರಲ್ ಕೋ-ಆಪ್ ಬ್ಯಾಂಕ್‌ನ ಚುನಾವಣೆಯಲ್ಲಿ 2ನೇ ಅವಧಿಗೆ ಆಯ್ಕೆಯಾದ ಶಿವಮ್ಮ ಕುರಡಗಿ, ಭಾರತೀಯ ಜನತಾ ಪಕ್ಷದ ಗದಗ ಜಿಲ್ಲಾ ಘಟಕದ ಅಧ್ಯಕರಾಗಿ ಅಧಿಕಾರ ವಹಿಸಿಕೊಂಡ ರಾಜಣ್ಣ ಕುರಡಗಿಯವರನ್ನು ರೋಟರಿ ಸೆಂಟ್ರಲ್ ವತಿಯಿಂದ ಅವರ ಮನೆಗೆ ತೆರಳಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ರೋಟರಿ ಗದಗ ಸೆಂಟ್ರಲ್ ಅಧ್ಯಕ್ಷ ರೋ. ಕುಮಾರ ಹಿರೇಮಠ, ಕಾರ್ಯದರ್ಶಿ ರೋ. ಸಂತೋಷ ತೋಟಗಂಟಿಮಠ, ಖಜಾಂಚಿಗಳಾದ ರೋ. ಸುನೀಲ ಕಬಾಡಿ, ಅಸಿಸ್ಟಂಟ್ ಗವರ್ನರ್ ರೋ. ಲಿಂಗರಾಜ ಗುಡಿಮನಿ, ಸದಸ್ಯರಾದ ರೋ. ಎಂ.ಸಿ. ಐಲಿ, ರೋ. ಎಂ.ಸಿ. ಬೇಲೆರಿ, ರೋ. ಶಶಿಧರ ದಿಂಡೂರ, ರೋ. ಮಧುಸೂದನ ಪುಣೆಕರ, ರೋ. ದಶರಥರಾಜ ಕೊಳ್ಳಿ, ರೋ. ಸುರೇಶ ಅಬ್ಬಿಗೇರಿ, ರೋ. ವೀರಣ್ಣ ಚಂದ್ರಗೌಡ್ರ, ರೋ. ರಾಜಶೇಖರ ಉಮಾನಾಬಾದಿ, ರೋ. ಮಲ್ಲಿಕಾರ್ಜುನ ಚಂದಪ್ಪನವರ, ರೋ. ಪರಾಶುರಾಮ, ರೋ. ರಾಜಣ್ಣ ಮುಧೋಳ ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka